

# ‘ಹೊಸ ಗುತ್ತಿಗೆ ವ್ಯವಸಾಯ’ ಮತ್ತು ಅದರ ಪರಿಣಾಮಗಳು

**ಮೊದಲು ಮತ್ತು ಪ್ರಸ್ತುತದ ಭೂ ಪರಿಸರದ ಚಿತ್ರಗಳು**


## ಪುನರ್ಚಿತ್

**ಸೆಪ್ಟೆಂಬರ್ 2015**

**ಪುನರ್ಚಿತ್,** ನಾಗವಳ್ಳಿ ಗ್ರಾಮ, ಚಂದಕವಾಡಿ ಹೋಬಳಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ – 571342

**ಮೊಬೈಲ್ ಸಂಖ್ಯೆ :** 9448360215, 8762842253

# ‘ಹೊಸ ಗುತ್ತಿಗೆ ವ್ಯವಸಾಯ’ ಮತ್ತು ಅದರ ಪರಿಣಾಮಗಳು

## ಸಾರಾಂಶ

ಕಳೆದ ಒಂದು ದಶಕದಿಂದ ‘ಹೊಸ ಗುತ್ತಿಗೆ ವ್ಯವಸಾಯ’ ಕರ್ನಾಟಕದಾದ್ಯಂತ ಹಬ್ಬಿಕೊಂಡಿದೆ. ಸಣ್ಣ ರೈತರು ತಮ್ಮ ಭೂಮಿಯನ್ನು ಹೊರಗಿನಿಂದ ಬಂದು ವ್ಯವಸಾಯ ಮಾಡುವವರಿಗೆ, ಅದರಲ್ಲೂ ವಾಣಿಜ್ಯ ಬೆಳೆ ಬೆಳೆಯುವವರಿಗೆ ಗುತ್ತಿಗೆ ನೀಡುತ್ತಿದ್ದಾರೆ. ಈ ರೀತಿಯ ಹೊಸ ಗುತ್ತಿಗೆ ವ್ಯವಸಾಯಕ್ಕೆ ಭೂಮಿ ನೀಡುವವರ ಕುರಿತು ಪುಣಜನೂರು ಪಂಚಾಯಿತಿಯ ಪ್ರದೇಶಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದರಲ್ಲೂ ಬಾನವಾಡಿ ಗ್ರಾಮವನ್ನು ಸಮಗ್ರ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದಲ್ಲಿ ಕಂಡು ಬಂದ ಮುಖ್ಯ ಅಂಶಗಳೆಂದರೆ ಪರಿಸರ ಹಾಳಾಗುತ್ತಿದ್ದು, ಮುಂದೆ ಕೃಷಿ ಭೂಮಿ ಸಾಮರ್ಥ್ಯವಿಲ್ಲದ ಕೃಷಿಯಾಗಿ ಮಾರ್ಪಡುತ್ತದೆ. ಹೊಸ ಗುತ್ತಿಗೆಗೆ ಭೂಮಿ ನೀಡಿದವರಿಗೆ ಆರ್ಥಿಕವಾಗಿ ಏನು ಸಿಗುತ್ತಿಲ್ಲ. ಅದರ ಲಾಭ ಗುತ್ತಿಗೆದಾರರಿಗೆ ಸಿಗುತ್ತಿದೆ. ಪ್ರಸ್ತುತ ಕೃಷಿ ಸಂರಚನೆಯಲ್ಲಿ ಸಂಕೀರ್ಣತೆ ಹೆಚ್ಚಾಗುತ್ತಿದ್ದು, ಅಂಚಿನಲ್ಲಿರುವ ಸೋಲಿಗರ ಸ್ಥಳೀಯ ಜ್ಞಾನ, ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳಾಗುತ್ತೆ.

# ‘ಹೊಸ ಗುತ್ತಿಗೆ ವ್ಯವಸಾಯ’ ಮತ್ತು ಅದರ ಪರಿಣಾಮಗಳು

‘ಹೊಸ ಗುತ್ತಿಗೆ ವ್ಯವಸಾಯ’ವು ಬಂಡವಾಳ ಆಧಾರಿತ ಕೃಷಿ ವ್ಯಾಪಾರೀಕರಣದ ಪ್ರತಿನಿಧಿಯಾಗಿ ಮಳೆನೆರಳಿನ ಪ್ರದೇಶಗಳಲ್ಲಿ ಹರಡುತ್ತಿದೆ. ಬದಲಾವಣೆಯ ಪ್ರಕ್ರಿಯೆಯಲ್ಲಿ ಹೊಸ ಗುತ್ತಿಗೆ ವ್ಯವಸಾಯದ ಪರಿಣಾಮಗಳು ಕೇವಲ ಜನರ ಮೇಲೆ ಮಾತ್ರ ಪ್ರಭಾವ ಬೀರದೆ ಮನುಷ್ಯ–ಭೂಮಿ, ಮನುಷ್ಯ–ಪರಿಸರ ಮತ್ತು ಮನುಷ್ಯ–ಮನುಷ್ಯರ ನಡುವಿನ ಸಂಬಂಧದ ಮೇಲೆ ಗಂಭೀರವಾದ ಪರಿಣಾಮಗಳನ್ನು ಬೀರುತ್ತಿದೆ. ಈ ಹೊಸ ಗುತ್ತಿಗೆ ವ್ಯವಸಾಯವು ಸ್ಥಳೀಯ ಉತ್ಪಾದನೆಯ ಮೇಲೆ, ಅಂಚಿನಲ್ಲಿರುವ ಜನರ ಬದುಕಿನ ಮೇಲೆ ಮತ್ತು ಸ್ಥಳೀಯ ಚಿಲ್ಲರೆ ವ್ಯಾಪಾರದ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಬಹುದು ? ಹೊಸ ರೀತಿಯ ಬಂಡವಾಳ ಆಧಾರಿತ ಮತ್ತು ವ್ಯಾಪಾರೀಕರಣ ಕೃಷಿಯಿಂದ ಈ ವಲಯದ ಜನರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯ ಮೇಲೆ ಯಾವ ರೀತಿಯ ಪರಿಣಾಮಗಳು ಬೀರಬಹುದು ? ಮತ್ತು ಭವಿಷ್ಯದಲ್ಲಿ ಸ್ಥಳೀಯ ಪರಿಸರದ ಮೇಲೆ ಯಾವ ರೀತಿಯ ಗಂಭೀರ ಪರಿಣಾಮಗಳಾಗಬಹುದು ? ಬಿಆರ್ಟಿ ಸಂರಕ್ಷಿತ ಅರಣ್ಯ ಪ್ರದೇಶದ ಬಿಗಿ ನಿಯಮಗಳನ್ನು ಮೀರಿ, ಈ ಅರಣ್ಯ ಪ್ರದೇಶದ ಹಲವು ಭಾಗಗಳಲ್ಲಿ ‘ಹೊಸ ಗುತ್ತಿಗೆ ವ್ಯವಸಾಯ’ ಹರಡುತ್ತಿರುವುದು ಹಲವು ಮುಖ್ಯ ಪ್ರಶ್ನೆಗಳನ್ನು ಹುಟ್ಟಿಹಾಕಿದೆ. ಈ ಪ್ರದೇಶದಲ್ಲಿ ವಾಣಿಜ್ಯ ಕೃಷಿಯ ಬಡ್ತಿ ಮತ್ತು ಅರಣ್ಯ ಇಲಾಖೆಯ ಹುಲಿ ಯೋಜನೆ ಮತ್ತು ಆನೆ ತಿರುಗಾಡುವ ವಲಯ (ಎಲಿಫೆಂಟ್ ಕಾರಿಡಾರ್) ಘೋಷಣೆಯಿಂದ ಕೃಷಿ ಭೂಮಿಯನ್ನು ಮರಳಿ ಪಡೆಯುವ ಪ್ರಯತ್ನವನ್ನು ಏಕಕಾಲದಲ್ಲಿ ಮಾಡುತ್ತಿದ್ದು ಆದಿವಾಸಿ ಸಮುದಾಯವಾದ ಸೋಲಿಗರ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಇವು ಒಳಗೊಂಡಂತೆ ಈ ರೀತಿಯ ವ್ಯವಸಾಯ ಪದ್ಧತಿಯನ್ನು ದೂರದೃಷ್ಟಿಯಲ್ಲಿ ಎಷ್ಟರಮಟ್ಟಿಗೆ ಮುಂದುವರಿಸಬಹುದು ಎಂಬುದು ಪ್ರಶ್ನೆಯಾಗಿದೆ.

ನಮ್ಮ ಅಧ್ಯಯನದಲ್ಲಿ ಬಿಆರ್‌ಟಿ ಬೆಟ್ಟಗಾಡಿನ ಪ್ರದೇಶವು ಮಳೆಯನ್ನು ಅವಲಂಬಿಸಿದ್ದು, ಈ ವಲಯದ ವ್ಯವಸಾಯ, ವ್ಯವಸಾಯದ ರಚನೆ ಹಾಗೂ ಪರಿಸರದ ಮೇಲಾಗುತ್ತಿರುವ ಪರಿಣಾಮಗಳೇನು ಎಂದು ದಾಖಲಿಸುವುದಾಗಿದೆ. ಹೆಚ್ಚುವರಿಯಾಗಿ ಈ ಅಧ್ಯಯನವು ಅಂಚಿನಲ್ಲಿರುವ ಸಮುದಾಯಗಳ ಕೃಷಿ ಸಂರಚನೆಯ ಸಂಕೀರ್ಣತೆಯನ್ನು ಪ್ರತಿನಿಧಿಸುತ್ತದೆ. ಹಾಗಾಗಿ ಈ ಪ್ರದೇಶದ ಆಳವಾದ ಅಧ್ಯಯನವನ್ನು ನವೆಂಬರ್ 2013 ರಿಂದ ಜನವರಿ 2014 ರವರೆಗೆ ನಡೆಸಲಾಗಿದ್ದು, ಎರಡು ವರ್ಷಗಳು (2011 ರಿಂದ 2013 ರವರೆಗೆ) ಈ ಪ್ರದೇಶದಲ್ಲಿ ನಾವು ಅವಲೋಕಿಸಿದ ವಿಷಯಗಳನ್ನು ಒಳಗೊಂಡಿದೆ. ಈ ಅಧ್ಯಯನಕ್ಕೆ ಹಣಕಾಸಿನ ನೆರವನ್ನು ರಿವಿಟಲೈಜ್ ರೈನ್‌ಫೆಡ್ ಅಗ್ರಿಕಲ್ಚರ್ (ಆರ್‌ಆರ್‌ಎ) ನೆಟ್‌ವರ್ಕ್ ಒದಗಿಸಿದೆ. ಈ ಮೂಲಕ ಕರ್ನಾಟಕದ ಮಳೆನೆರಳಿನ

ಪ್ರದೇಶಗಳ ವ್ಯವಸಾಯ ಮತ್ತು ವ್ಯವಸಾಯದಲ್ಲಿನ ಈ ಪರಿಸ್ಥಿತಿಗೆ ಕಾರಣಗಳೇನಿರಬಹುದು ಎಂಬ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನಗಳನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

**ಅಧ್ಯಯನದ ಪ್ರದೇಶ**

ಈ ಅಧ್ಯಯನ ಪ್ರದೇಶವು ಚಾಮರಾಜನಗರ ತಾಲ್ಲೂಕಿನ ಪುಣಜನೂರು ಪಂಚಾಯಿತಿಗೆ ಸೇರಿದ್ದು, ಇದು ನೀಲಗಿರಿ ವಲಯದ ಮಳೆ ನೆರಳಿನ ಪ್ರದೇಶ ಮತ್ತು ಬಿಳಿಗಿರಿ ರಂಗನ ಬೆಟ್ಟ (ಬಿಆರ್‌ಟಿ) ಹುಲಿ ಸಂರಕ್ಷಣಾ ಯೋಜನೆ ಮತ್ತು ಆನೆ ಕಾರಿಡಾರ್ ವಲಯದಲ್ಲಿದೆ. ಈ ಪಂಚಾಯಿತಿಯು ತಮಿಳುನಾಡು ಮತ್ತು ಕರ್ನಾಟಕದ ಗಡಿಯಂಚಿನ ಪ್ರದೇಶವಾಗಿದ್ದು, ರಾಷ್ಟ್ರೀಯ ಹೆದ್ದಾರಿ 209 ರಲ್ಲಿದೆ. ಅರಣ್ಯದಂಚಿನ ಈ ವಲಯ ಮತ್ತು ಹಳ್ಳಿಗಳ ನಡುವಿನ ಸಮಸ್ಯೆಗಳೆಂದರೆ ಇಲ್ಲಿನ ಸಾಮಾಜಿಕ ಮತ್ತು ಭೌತಿಕ ಪರಿಸರ ವೇಗವಾಗಿ ಬದಲಾಯಿಸುತ್ತಿದೆ. ಇಲ್ಲಿನ ಭೂಮಿ ವಾಣಿಜ್ಯ ವ್ಯವಸಾಯಕ್ಕೆ ಪರಿವರ್ತನೆಯಾಗಿದ್ದು, ಇಲ್ಲಿನ ಪ್ರಾಕೃತಿಕ ಸಂಪನ್ಮೂಲಗಳನ್ನು (ಭೂಮಿ, ಕಾಡು, ನೀರು, ಮಣ್ಣು ಇತ್ಯಾದಿ) ಬರಿದು ಮಾಡಲಾಗುತ್ತಿದೆ. ಹೊರಗಿನ ಹೊಸ ಅವಕಾಶಗಳ ಜೊತೆಗೆ ಸಂರಕ್ಷಣೆ ವರ್ಸಸ್ ಜೀವನೋಪಾಯದ ಅವಕಾಶಗಳ ನಡುವಿನ ಉದ್ವಿಗ್ನತೆ ಇದೆ. ಸಾಂಪ್ರದಾಯಿಕ ಬೇಡಿಕೆಗಳು ಒಂದೆಡೆಯಾದರೆ ಗ್ರಾಹಕ ವ್ಯಾಪಾರದ ಪೈಪೋಟಿ ಮತ್ತೊಂದೆಡೆ. ಅಲ್ಲದೆ ಸ್ಥಳೀಯವಾಗಿದ್ದ ಸಾಮೂಹಿಕ ಜವಾಬ್ದಾರಿ ಕ್ಷೀಣಿಸುತ್ತಿದೆ. ಎಲ್ಲರ ಆರ್ಥಿಕ, ಸಾಮಾಜಿಕ ಚಲನೆ ಸಾಮೂಹಿಕವಾಗಿರುವ ಬದಲು ವ್ಯಕ್ತಿಗತವಾಗಿ ಬೆಳವಣಿಗೆಯಾಗುತ್ತಿದೆ. ಮಳೆಯನ್ನು ಅವಲಂಬಿಸಿರುವ ಈ ಬೆಟ್ಟಗಾಡಿನ ಒಣ ಪ್ರದೇಶಗಳು ಹಲವು ಗಿರಿಜನರ ಪ್ರವೃತ್ತಿಗಳನ್ನು ಪ್ರತಿನಿಧಿಸುತ್ತಿದ್ದು, ಈ ವಲಯದ ಕೃಷಿ ಮತ್ತು ಕೃಷಿ ರಚನೆ, ಕೃಷಿ ಅವಶ್ಯಕತೆಗಳನ್ನು ಈ ಅಧ್ಯಯನವು ದಾಖಲಿಸಿದೆ. ವಾಣಿಜ್ಯ ಕೃಷಿಯ ಬಡ್ತಿ ಮತ್ತು ಅರಣ್ಯ ಇಲಾಖೆಯು ಹುಲಿ ಯೋಜನೆ ಮತ್ತು ಆನೆ ತಿರುಗಾಡುವ ವಲಯದ (ಎಲಿಫೆಂಟ್ ಕಾರಿಡಾರ್) ಮೂಲಕ ಕೃಷಿ ಭೂಮಿಯನ್ನು ಮರಳಿ ಪಡೆಯುವ ಪ್ರಯತ್ನವನ್ನು ಏಕಕಾಲದಲ್ಲಿ ಮಾಡುತ್ತಿದ್ದು ಈ ಮುಖ್ಯ ವಿಷಯಗಳು ಕೂಡ ಈ ಅಧ್ಯಯನಕ್ಕೆ ಪೂರಕವಾಗಿವೆ.

ಈ ಅಧ್ಯಯನ ಪ್ರದೇಶಗಳು ಭಾರತದ ಹಳ್ಳಿಗಳ ನಮೂನೆಯಾಗಿದ್ದು, ಕೆಲವು ಗುರುತರವಾದ ವ್ಯತ್ಯಾಸಗಳು ಮತ್ತು ವಿಶೇಷತೆಗಳನ್ನು ಗುರುತಿಸಬಹುದಾಗಿದೆ. ಈ ಪ್ರದೇಶದ ಅರಣ್ಯ ಭೂಮಿಯನ್ನು ಕೃಷಿ ಭೂಮಿಯಾಗಿ ಪರಿವರ್ತಿಸಲಾಗಿದ್ದು, ಇಲ್ಲಿನ ಕೃಷಿ ವ್ಯವಸ್ಥೆಯು ಹೊಸದಾಗಿದೆ. ಪುಣಜನೂರು ಪಂಚಾಯಿತಿಯು 26 ಗ್ರಾಮಗಳನ್ನು ಒಳಗೊಂಡಿದ್ದು (ಒಂದು ಬೇಚರೆ ಗ್ರಾಮ ಸೇರಿ), ಈ ಗ್ರಾಮಗಳಲ್ಲಿ ಹೆಚ್ಚು ಸೋಲಿಗ ಮತ್ತು ಲಂಬಾಣಿ ಸಮುದಾಯದ ಜನರಿದ್ದಾರೆ. ಈ ಪ್ರದೇಶದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಮಾದಿಗ (ಚರ್ಮಕಾರರ ಕೆಲಸ ಮಾಡುತ್ತಿದ್ದವರು) ಕುಟುಂಬಗಳು, ಮುಸ್ಲಿಂ ಕುಟಂಬಗಳು ಮತ್ತು ಕೆಲವು ಸಂಖ್ಯೆಯಲ್ಲಿರುವ ಬಡಗ ಮತ್ತು ಲಿಂಗಾಯಿತ ಕುಟುಂಬಗಳಿವೆ. ಈ ಪಂಚಾಯಿತಿ ಗ್ರಾಮಗಳ ಬಹುತೇಕ ಜನರಲ್ಲಿ ಸೋಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದು ಅರಣ್ಯ ಪ್ರದೇಶದಿಂದ ಸ್ಥಳಾಂತಗೊಂಡವರಾಗಿದ್ದಾರೆ. ಸೋಲಿಗರು ಬಿಆರ್‌ಟಿ ಅರಣ್ಯದ

ಮೂಲದವರಾದರೂ ಅಲ್ಲಿಂದ ಅವರು ಹೊರಹಾಕಲ್ಪಟ್ಟವರಾಗಿದ್ದಾರೆ. ಅವರು ಇಂದು ಕೃಷಿ ಕೂಲಿಕಾರರು ಅಥವಾ ನುರಿತ ಕೂಲಿ ಕಾರ್ಮಿಕ ವರ್ಗಗಳಾಗಿದ್ದಾರೆ. ಅವರಿಗೆ ಇವತ್ತಿಗೂ ಅರಣ್ಯದ ಜೊತೆಗೆ ಸಂಬಂಧವಿದೆ (ಆದರೆ ಪ್ರವೇಶಾಧಿಕಾರ ಸಮಸ್ಯೆಯಿಂದ ಕೂಡಿದೆ). ಅವರ ಜೀವನದ ಸ್ಥಿತಿ ಕಳಪೆಯಿಂದ ಕೂಡಿದ್ದು, ಹೆಚ್ಚಿನ ಬಡತನ, ಕಡಿಮೆ ಆದಾಯ ಮತ್ತು ಹೆಚ್ಚಿನ ಅಪೌಷ್ಟಿಕತೆ ಸಮಸ್ಯೆಗಳಿಂದ ಕೂಡಿದೆ. ಅವರ ಮನೆಗಳ ಸ್ಥಿತಿ, ಶಿಕ್ಷಣ, ರಾಜಕೀಯ ಮತ್ತು ಆರ್ಥಿಕ ವಿಷಯಗಳಲ್ಲಿ ಅವರ ಹತ್ತಿರದವರ (ಲಂಬಾಣಿ, ಮುಸ್ಲಿಂ, ಇತರರು) ಸ್ಥಾನಮಾನಕ್ಕಿಂತ ಕೆಳಮಟ್ಟದಲ್ಲಿದ್ದಾರೆ.

ಈ ಪ್ರದೇಶದಲ್ಲಿ ವಾಸಿಸುವ ಮತ್ತೊಂದು ಪ್ರಬಲ ಸಮುದಾಯವೆಂದರೆ ಲಂಬಾಣಿ (ಅಥವಾ ಬಂಜಾರ) ಸಮುದಾಯ. ಇವರು 1950 ರ ಸುಮಾರಿನಲ್ಲಿ ವಲಸೆ ಬಂದವರಾಗಿದ್ದು, ಈ ಪ್ರದೇಶದಲ್ಲಿ ಪ್ರಬಲ ಜಾತಿ ಗುಂಪಾಗಿದೆ. ರಾಜ್ಯದಲ್ಲಿ ಇವರನ್ನು ಪರಿಶಿಷ್ಟ ಜಾತಿ (ಎಸ್ಸಿ) ಎಂದು ಗುರುತಿಸಿದ್ದು, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ ಪರಿಶಿಷ್ಟ ವರ್ಗ (ಎಸ್ಟಿ) ಎಂದು ಪರಿಗಣಿಸಲಾಗಿದೆ. ಇವರು ಮುಖ್ಯವಾಗಿ ವ್ಯವಸಾಯ ಮತ್ತು ಕೂಲಿಕಾರ್ಮಿಕರಾಗಿ ದುಡಿಯುತ್ತಿದ್ದು, ಕೆಲವು ಲಂಬಾಣಿ ಕುಟುಂಬಗಳು ಉತ್ತಮ ಸ್ಥಿತಿಯಲ್ಲಿವೆ. ಅವರು ದೊಡ್ಡ ಪ್ರಮಾಣದ (5 ರಿಂದ 40 ಎಕರೆವರೆಗೂ) ನೀರಾವರಿ (ಕೊಳವೆಬಾವಿ) ಭೂಮಿಯನ್ನು ಹೊಂದಿದ್ದು ಕೃಷಿಯನ್ನು ಮಾಡುತ್ತಿದ್ದಾರೆ. ಅಲ್ಲದೆ ವ್ಯವಸಾಯೇತರ ಮೂಲಗಳಿಂದ ಬರುವ ಆದಾಯವನ್ನು ಹೊಂದಿದ್ದಾರೆ. ಇವರು ನಗರ ಮತ್ತು ಸರ್ಕಾರಿ ವಲಯಗಳಲ್ಲಿ ಉನ್ನತ ಶಿಕ್ಷಣ ಮತ್ತು ಉದ್ಯೋಗವಕಾಶಗಳನ್ನು ಪಡೆದುಕೊಳ್ಳುವ ಸಾಮರ್ಥ್ಯ ಹೊಂದಿದ್ದಾರೆ. ಈ ಪ್ರದೇಶದ ಮುಸ್ಲಿಂರು ಇತರರಿಗೆ ಹೋಲಿಸಿದಾಗ ಸಂಖ್ಯೆಯಲ್ಲಿ ಕಡಿಮೆಯಿದ್ದರೂ, ಅವರು ವ್ಯಾಪಾರ (ಹೋಟೆಲ್, ಅಂಗಡಿ, ದಿನಸಿ ಖರೀದಿ, ಗಾರಾಜ್) ಕೇಂದ್ರಗಳನ್ನು ಹೊಂದಿದ್ದು, ದೊಡ್ಡ ದೊಡ್ಡ ವಾಹನಗಳನ್ನು (ಟ್ರ್ಯಾಕ್ಟರ್‌ಗಳು, ಸರಕು ಸಾಗಾಣಿ ವಾಹನಗಳು ಸೇರಿದಂತೆ) ಬಾಡಿಗೆ ಬಿಡುತ್ತಾರೆ. ವಾಹನ ರಿಪೇರಿ ಅಂಗಡಿಗಳನ್ನು ಹೊಂದಿದ್ದು ಅವರ ಜೀವನ ನಿರ್ವಹಣೆ ಉತ್ತಮವಾಗಿದೆ.

ಈ ಗ್ರಾಮಗಳ ಜಾತಿಗಳ ನಡುವಿನ ಸಂಬಂಧವನ್ನು ನೋಡಿದಾಗ ಉಳಿದ ಜಾತಿಗಳಿಗಿಂತ ವಿಶೇಷವಾಗಿ ಸೋಲಿಗ ಮತ್ತು ಲಂಬಾಣಿ ಸಮುದಾಯದ ಯುವ ಜನರ ನಡುವೆ ಅಂತರ್ಜಾತಿಯ ಮದುವೆ ಕಾರಣಕ್ಕಾಗಿ, ಹಬ್ಬ ಮತ್ತು ಜಾತ್ರೆಗಳ ಆಚರಣೆ ಸಂದರ್ಭಗಳಲ್ಲಿ ನಡೆಯುವ ಕಲಹಗಳ ಕಾರಣಕ್ಕಾಗಿ ಉದ್ವಿಘ್ನತೆ ಕಂಡು ಬರುತ್ತದೆ. ಈ ಪ್ರದೇಶವು ಫೆಬ್ರವರಿಯಿಂದ ಜುಲೈವರೆಗೆ ಋತುಮಾನವಲ್ಲದ ಸಂದರ್ಭವಾಗಿದ್ದು, ದೊಡ್ಡ ಪ್ರಮಾಣದಲ್ಲಿ ಯುವ ಜನರು ಪಕ್ಕದ ರಾಜ್ಯಗಳಾದ ಕೇರಳ, ತಮಿಳುನಾಡಿನ ಬಟ್ಟೆ ಕಾರ್ಖಾನೆಗಳು ಮತ್ತು ನಗರ ಪ್ರದೇಶದ ಕೆಳಹಂತದ ಕೆಲಸಗಳಲ್ಲಿ ದುಡಿಮೆ (ವಾಹನಚಾಲಕರು, ಅಂಗಡಿ, ಬೇಕರಿ, ಹೋಟೆಲ್‌ಗಳಲ್ಲಿ ವ್ಯಾಪಾರ ಮಾಡುವ ವ್ಯಕ್ತಿಗಳಾಗಿ, ಕ್ಯಾಸೆಟ್ ಮಾರಾಟಗಾರರಾಗಿ, ಕೂಲಿ ಕೆಲಸಗಾರರಾಗಿ, ಮ್ಯಾಕನಿಕ್‌ಗಳಾಗಿ) ಮಾಡಲು ವಲಸೆ ಹೋಗುತ್ತಾರೆ.

**ಹೊಸ ಪ್ರವೃತ್ತಿ (ಟ್ರೆಂಡ್ಸ್)** : ಈ ಪ್ರದೇಶದಲ್ಲಿ ವಾಣಿಜ್ಯ ಕೃಷಿಯ ಹೆಚ್ಚಳ ; ಯುವಜನರ ವಲಸೆ ; ಕೆಲವು ಜನರು ಕಾನೂನುಬಾಹಿರ ಚಟುವಟಿಕೆಗಳಲ್ಲಿ (ಹುಲಿ, ಆನೆ, ಜಿಂಕೆ ಕಳ್ಳಬೇಟೆ, ಮರಮಟ್ಟುಗಳ ಸಾಗಾಟ, ಕಳ್ಳ ಭಟ್ಟಿ ತಯಾರಿ ಇತ್ಯಾದಿ) ತೊಡಗಿಸಿಕೊಳ್ಳುತ್ತಿರುವ ಕಾರಣದಿಂದ ಹಲವು ಪ್ರಕರಣಗಳಡಿ ಪೋಲೀಸ್ ಠಾಣೆ ಮತ್ತು ನ್ಯಾಯಾಲಯಕ್ಕೆ ಅಲೆದಾಡುತ್ತಿದ್ದಾರೆ.

ಈ ಪ್ರದೇಶದ 'ಹೊಸ ಬಗೆಯ ಗುತ್ತಿಗೆ ವ್ಯವಸಾಯ'ದ ಪರಿಚಯದಿಂದ ಚೂರಾಗಿರುವ ಗಿರಿಜನರ ಭೂಮಿಯನ್ನು ಬಂಡವಾಳಶಾಹಿ ಉತ್ಪಾದಕರ ಅವಶ್ಯಕತೆಗಾಗಿ ಹಿಡಿದಿಟ್ಟುಕೊಳ್ಳಲಾಗುತ್ತಿದೆ. ಈ ರೀತಿಯ ಉತ್ಪಾದನೆಯ ಮಾದರಿ ಮತ್ತು ಭೂಮಿ ಪರಾಧೀನಗೊಳಿಸುವ ಈ ಎರಡು ಗುರುತರವಾದ ಕಾರಣಗಳನ್ನು ಈ ಸಂದರ್ಭಗಳಲ್ಲಿ ಅರ್ಥಮಾಡಿಕೊಳ್ಳಬೇಕು. ಕರ್ನಾಟಕದ ವ್ಯವಸಾಯದ ರಾಜನೀತಿಗಳಲ್ಲಿ/ ಯೋಜನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಡಗಗಳು ಹೊಂದಿರುವ ಕೃಷಿ ಭೂಮಿಯನ್ನು ಇತರರಿಗೆ ಮಾರಾಟ ಮಾಡುವ ಅನುಮತಿ ನೀಡಿಲ್ಲ ಮತ್ತು ಕೃಷಿಕರಲ್ಲದವರು ಕೂಡ ಭೂಮಿಯನ್ನು ಖರೀದಿಸಲು ಅವಕಾಶವಿಲ್ಲ. ಆದರೆ ಹೊರಗಿನ ಹಲವು ಬಂಡವಾಳಶಾಹಿ ಕೃಷಿಕರು ರಾಜ್ಯದೊಳಗೆ ಗುತ್ತಿಗೆ ಆಧಾರದಲ್ಲಿ ಎಸ್ಸಿ, ಎಸ್ಟಿಗಳ ಭೂಮಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಒಣ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಹಾಕಿಸಿ ನೀರಾವರಿ ಪ್ರದೇಶದಲ್ಲಿ ಬೆಳೆಯುವ ಶುಂಠಿ, ಅರಿಶಿಣ, ಬಾಳೆ ಮತ್ತು ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದರ ಪ್ರಭಾವ ಅಂಚಿನಲ್ಲಿರುವ ಆದಿವಾಸಿ ಗುಂಪುಗಳ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಬಹುದು ಎಂಬ ಹಿನ್ನೆಲೆಯಲ್ಲಿ ಆದಿವಾಸಿ ಸಮುದಾಯದ ಒಂದು ಗ್ರಾಮವನ್ನು ಸಮಗ್ರ ವಿಮರ್ಶೆಗೆ ಒಳಪಡಿಸಲಾಗಿದೆ. ಆ ಗ್ರಾಮದಲ್ಲಿನ ಸಾಮಾಜಿಕ-ಆರ್ಥಿಕ ವಿವರ, ಭೂ ಬಳಕೆ ಬಗ್ಗೆ ಮತ್ತು ಈ ವಲಯದ ಕಾನೂನು – ಕಟ್ಟಳೆ ಉಲ್ಲಂಘನೆ ವಿವರಗಳನ್ನು ದಾಖಲಿಸಲಾಗಿದೆ.

**ಬಾನವಾಡಿ ಗ್ರಾಮ**

ಬಾನವಾಡಿ ಪುನರ್‌ವಸತಿಗೆ ಒಳಪಟ್ಟ ಗ್ರಾಮವಾಗಿದೆ. ಭಾರತ ಸರ್ಕಾರವು 1974 ರಲ್ಲಿ ಬಿಳಿಗಿರಿ ರಂಗನಾಥ ದೇವಸ್ಥಾನದ ಸಂರಕ್ಷಿತ ಅರಣ್ಯ ಪ್ರದೇಶವಾಗಿ ಘೋಷಣೆ ಮಾಡಿದ ಕಾರಣದಿಂದ ಈ ಭಾಗದ ಕೆಲವು ಜನರು ಬಾನವಾಡಿಗೆ ಪುನರ್ ವಸತಿಗೊಂಡವರಾಗಿದ್ದಾರೆ. ಈ ಗ್ರಾಮದಲ್ಲಿ ಸೋಲಿಗರು ವಾಸವಾಗಿದ್ದು ಈ ಪ್ರದೇಶವನ್ನು 'ಕಾಲೋನಿ' ಅಥವಾ 'ಪೋಡು' ಎಂದು ಕರೆಯಲಾಗಿದೆ. ಗ್ರಾಮದಲ್ಲಿ ಒಟ್ಟು 65 ಕುಟುಂಬಗಳಿದ್ದು ಸಮೀಕ್ಷೆಯಲ್ಲಿ ಐವತ್ತೈದು (55) ಕುಟುಂಬಗಳ ಸಮಗ್ರ ವಿವರಗಳನ್ನ ಸಂಗ್ರಹಿಸಲಾಗಿದೆ. ಉಳಿದ 10 ಕುಟುಂಬಗಳು ಬೇರೆ ರಾಜ್ಯಗಳ ಕಡೆ ಕೆಲಸಕ್ಕಾಗಿ ವಲಸೆ ಹೋಗಿದ್ದು, ಸಮೀಕ್ಷೆಗೆ ಲಭ್ಯರಾಗದ ಕಾರಣ ಸಮೀಕ್ಷೆಯಲ್ಲಿ ಕೈ ಬಿಡಲಾಗಿದೆ.

ಸಮೀಕ್ಷೆಗೆ ಒಳಪಡಿಸಿದ 55 ಕುಟುಂಬಗಳಲ್ಲಿ ಒಟ್ಟು 217 ಜನರಿದ್ದಾರೆ. ಇವರಲ್ಲಿ ಪುರುಷರು ಸಂಖ್ಯೆ 92, ಮಹಿಳೆಯರ ಸಂಖ್ಯೆ 130 ಇದ್ದು, ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ಶೇಕಡ 75 ರಷ್ಟು ಜನರು 35 ವರ್ಷದೊಳಗಿನ ಗುಂಪಿನಲ್ಲಿದ್ದು, ಹಿರಿಯರ ಸಂಖ್ಯೆ ಕಡಿಮೆ ಇದೆ. ಇವರ ಸಾಕ್ಷರತೆ ಮತ್ತು ಶಿಕ್ಷಣದ ಮಟ್ಟ ಬಹಳ ಕಡಿಮೆ ಇದ್ದು ಈ ಗ್ರಾಮದ ಒಬ್ಬರೂ ಕೂಡ ಪದವಿ ಶಿಕ್ಷಣವನ್ನು ಪೂರ್ಣಗೊಳಿಸಿಲ್ಲ. 12 ಜನರು ಮಾತ್ರ ಮೆಟ್ರಿಕ್ ಶಿಕ್ಷಣದಲ್ಲಿ ಉತ್ತೀರ್ಣರಾಗಿದ್ದಾರೆ. ಆದರೆ  ಮೆಟ್ರಿಕ್ ಮತ್ತು ಕಾಲೇಜು ಶಿಕ್ಷಣ ಪಡೆದವರ ಜೊತೆ ಅವರ ಕಲಿಕೆಗೆ ಸಂಬಂಧಿಸಿದಂತೆ ಹಲವಾರು ಚಟುವಟಿಕೆಗಳನ್ನು ಮಾಡಿದ್ದು, ಆ ಮೂಲಕ ಕಂಡುಬಂದ ಅಂಶವೆಂದರೆ ಅವರ ಕಲಿಕೆಯ ಗುಣಮಟ್ಟ ತುಂಬಾ ಕಳಪೆಯಿಂದ ಕೂಡಿದೆ. ಕುಟಂಬಗಳ ಮಾಸಿಕ ಮತ್ತು ವಾರ್ಷಿಕ ಆದಾಯ ಅಂದಾಜು ಕೂಡ ಪೂರಕವಾಗಿಲ್ಲ, ಶೇಕಡ 52 ರಷ್ಟು ಕುಟುಂಬಗಳು ಹಣವನ್ನು ಸಾಲ ತಂದರೂ ಮನೆ ಖರ್ಚು ಮತ್ತು ಕೃಷಿಗೆ ಕೆಲಸಗಳಿಗೆ ಬಳಸಿದ್ದಾರೆ. ಹೆಚ್ಚುವರಿಯಾಗಿ ಹಬ್ಬ ಮತ್ತು ಆರೋಗ್ಯಕ್ಕೆ ಎಂದು ಖರ್ಚು ಮಾಡಿದ್ದು, ಒಬ್ಬರೂ ಕೂಡ ಶಿಕ್ಷಣಕ್ಕಾಗಿ ಖರ್ಚು ಮಾಡಿಲ್ಲ. ಈ ಗ್ರಾಮದ ಬಹುತೇಕ ಕುಟುಂಬಗಳು ಉಳಿತಾಯ ಖಾತೆ ತೆರೆದಿದ್ದರೂ (ಉದ್ಯೋಗ ಖಾತ್ರಿ, ವಿಧವಾ ವೇತನ, ಬೆಳೆ ಪರಿಹಾರ, ರಿಯಾಯಿತಿ ಇತ್ಯಾದಿಗಳಿಗಾಗಿ), ನಾಲ್ಕು ಕುಟುಂಬಗಳು ಮಾತ್ರ ಉಳಿತಾಯ ಖಾತೆಯಲ್ಲಿ ನಿರಂತರವಾಗಿ ವ್ಯವಹಾರ ಮಾಡುತ್ತಿದ್ದಾರೆ. ಬಹುತೇಕ (55 ರಲ್ಲಿ 47 ಕುಟುಂಬ) ಅಂತ್ಯೋದಯ ಕಾರ್ಡುಗಳನ್ನು ಹೊಂದಿದ್ದು, ತಿಂಗಳ ಆಹಾರಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಗ್ರಾಮದಲ್ಲಿ 2012 ರಿಂದ ಈವರಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯೂ ತಾಲ್ಲೂಕು ಸಮಾಜ ಕಲ್ಯಾಣ ಮೂಲಕ ಪೌಷ್ಟಿಕ ಆಹಾರವನ್ನು ಪೂರೈಕೆ ಮಾಡುತ್ತಿದೆ.

ಭೂ ಹಿಡುವಳಿಗೆ ಸಂಬಂಧಿಸಿದಂತೆ ಬಾನವಾಡಿಯ 55 ಕುಟುಂಬಗಳಲ್ಲಿ 28 ಕುಟುಂಬಗಳಿಗೆ ಯಾವುದೇ ಭೂಮಿ ಇಲ್ಲ. ಉಳಿದ 27 ಕುಟುಂಬಗಳು ಸ್ವಲ್ಪ ಮಟ್ಟದ ಸ್ವಂತ ಭೂಮಿಯನ್ನು ಹೊಂದಿದ್ದಾರೆ. ಭೂ ಇರುವ ಕುಟುಂಬಗಳಲ್ಲಿ 6 ಕುಟುಂಬಗಳಿಗೆ 2 ಎಕರೆ, 12 ಕುಟುಂಬಗಳಿಗೆ 1 ರಿಂದ 2 ಎಕರೆಗಳು ಮತ್ತು 9 ಕುಟುಂಬಗಳು 1 ಎಕರೆಗಿಂತಲ್ಲೂ ಕಡಿಮೆ ಭೂಮಿಯನ್ನು ಹೊಂದಿದ್ದಾರೆ. ಇವರಲ್ಲಿ 08 ಕುಟುಂಬಗಳು (27 ರಲ್ಲಿ ಸ್ವಂತ ಭೂಮಿ ಇರುವವರು) ಹೊಸ ಗುತ್ತಿಗೆಗೆ ನೀಡಿದ್ದು, ವರ್ಷದಿಂದ ವರ್ಷಕ್ಕೆ (2010-11 ರಲ್ಲಿ ಒಬ್ಬರು, 2011-12 ರಲ್ಲಿ 03, 2013-14 ರಲ್ಲಿ 08 ಕುಟುಂಬಗಳು ಕೃಷಿ ಋತುವಿನಲ್ಲಿ ನೀಡಿದ್ದಾರೆ) ಹೆಚ್ಚಾಗಿದೆ. ಈ ರೀತಿಯ ಪ್ರವೃತ್ತಿಗಳು ಬಹುತೇಕರು ತಮ್ಮ ಭೂಮಿಯನ್ನು ಹೊಸ ಗುತ್ತಿಗೆ ವ್ಯವಸಾಯಕ್ಕೆ ನೀಡುತ್ತಿದ್ದಾರೆ ಎಂಬುದನ್ನು ಸೂಚಿಸುತ್ತಿದೆ.

**ಬಾನವಾಡಿ ಗ್ರಾಮದ ಸೋಲಿಗರ ಸಂದರ್ಶನ**

**ಗ್ರಾಮೀಣ ಆರ್ಥಿಕ ಸೇವೆಗಳಲ್ಲಿ ಬದಲಾವಣೆ**

ಪ್ರಸ್ತುತ ಗ್ರಾಮೀಣ ಪ್ರದೇಶಗಳ ಆರ್ಥಿಕ ಸೇವೆಯನ್ನು ಪೂರೈಸುವ ಹಲವು ಹೊಸ ಗುಂಪುಗಳಿವೆ. ಆ ಗುಂಪುಗಳು ಹಣ ನೀಡುವುದರಿಂದ ಹಿಡಿದು ಬಿತ್ತನೆ, ಬೀಜ, ರಸಾಯನಿಕಗೊಬ್ಬರ, ಕ್ರಿಮಿನಾಶಕ ಹಾಗೂ ಯಂತ್ರೋಪಕರಣಗಳ ಪೂರೈಕೆ ಮಾಡುತ್ತಾರೆ. ಬೆಳೆದ ಉತ್ಪನ್ನಗಳನ್ನು ಕೊಂಡುಕೊಳ್ಳುವ ಮತ್ತು ಮಾರಾಟ ಮಾಡುವ ಹಾಗೂ ಪೂರಕ ಕೆಲಸಗಳಿಗೆ ಸೇವೆಗಳನ್ನು ಒದಗಿಸುವ ಕೆಲಸಗಳನ್ನು ಮಾಡುತ್ತಾರೆ. ಹಾಗಾಗಿ ಕೃಷಿ ಉತ್ಪಾದನೆಯ ಮೇಲೆ ಆರ್ಥಿಕ ಪ್ರಭಾವವು ಗಂಭೀರ ಪರಿಣಾಮ ಬೀರಿದೆ. ಋತುಮಾನಕ್ಕೆ ಅನುಗುಣವಾಗಿದ್ದ ಇಲ್ಲಿನ ಕೃಷಿ ಉತ್ಪಾದನೆ, ಪ್ರಸ್ತುತದಲ್ಲಿ ಹೆಚ್ಚು ಮತ್ತು ವೇಗವಾಗಿ ಬೆಳೆಯುವ ವಾಣಿಜ್ಯ ಬೆಳೆಗಳಿಗೆ ಬದಲಾಗಿದೆ. ಹೆಚ್ಚು ಬಂಡವಾಳವಿಲ್ಲದೆ ಮಾಡುತ್ತಿದ್ದ ಕೃಷಿಯಲ್ಲಿ ಇಂದು ಹೆಚ್ಚು ಬಂಡವಾಳ ಹೂಡಿಕೆ, ಹೊಸ ತಂತ್ರಜ್ಞಾನಗಳ ಬಳಕೆ, ನೀರಾವರಿ ವ್ಯವಸ್ಥೆ (ಕೊಳವೆಬಾವಿಗಳನ್ನು ಕೊರೆಸುವಿಕೆ) ಮತ್ತು ಹೆಚ್ಚು ಉತ್ಪನ್ನ ಪಡೆಯಲು ಬೆಳೆಗಳಿಗೆ ಹೆಚ್ಚು, ಹೆಚ್ಚು ಒಳಸುರಿಗಳನ್ನು (ಹೈಬ್ರೀಡ್ ಬಿತ್ತನೆ-ಬೀಜ, ರಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳು) ಹಾಕಲಾಗುತ್ತಿದೆ. ಬಹು ಬೆಳೆಗಳಿಗೆ (ರಾಗಿ, ತೃಣಧಾನ್ಯಗಳು, ಕಾಳುಗಳು, ಎಣ್ಣೆಕಾಳುಗಳು ಇತ್ಯಾದಿ) ಬದಲಾಗಿ ವಾಣಿಜ್ಯ ಬೆಳೆಗಳಾದ ಏಕ ಬೆಳೆ ಪದ್ಧತಿಗೆ (ಶುಂಠಿ, ಅರಿಶಿನ, ಬಾಳೆ, ಕಬ್ಬು, ಮುಸುಕಿನ ಜೋಳ, ಚೆಂಡು ಹೂ ಇತ್ಯಾದಿ) ಬದಲಾಗಿದೆ. ಹೀಗೆ ವಾಣಿಜ್ಯ ಬೆಳೆಗಳನ್ನು ಬೆಳೆಯುವುದಕ್ಕೆ ಬದಲಾಗಿರುವುದನ್ನು ಅಲ್ಲಿನ ವ್ಯವಸಾಯದ ಮಾದರಿಗಳು ಸೂಚಿಸುತ್ತಿವೆ. ಮುಖ್ಯವಾಗಿ ವ್ಯವಸಾಯ ಮಾಡುತ್ತಿದ್ದ ಮಾಲೀಕ, ಹೊಸ ಉತ್ಪಾದನೆಯ ಏರ್ಪಾಟಗಳನ್ನು ಮಾಡಿಕೊಂಡಿದ್ದು 'ಹೊಸ ಗುತ್ತಿಗೆ ವ್ಯವಸಾಯ' ಹೆಸರಿನಲ್ಲಿ ಹೊರಗಿನ ವ್ಯವಸಾಯಗಾರರಿಗೆ ವಾರ್ಷಿಕವಾಗಿ ಇಂತಿಷ್ಟು ಎಂದು ನಿಗಧಿಪಡಿಸಿಕೊಂಡು ವ್ಯವಸಾಯದ ಭೂಮಿಯನ್ನು ಬಿಟ್ಟುಕೊಡುತ್ತಿದ್ದಾರೆ. ಈ ಗುತ್ತಿಗೆ ವ್ಯವಸಾಯದ ಪ್ರವೇಶಿಸುವಿಕೆಯ ಜೊತೆ ಹೊಸ ಕೃಷಿ-ವ್ಯಾಪಾರ ಗುಂಪುಗಳು ಮತ್ತು ಅವರ ಕಾರ್ಯಕರ್ತ /ಪ್ರತಿನಿಧಿಗಳು/ಏಜೆಂಟ್‌ರು, ಅವರ ಮಾರ್ಗದರ್ಶಕರು

ಮತ್ತು ಕೃಷಿ ಮೇಲ್ವಿಚಾರಣೆ ಮಾಡುವವರು ಪ್ರವೇಶಿಸಿದ್ದಾರೆ. ಇವರು ಬೆಳೆಗಳ ಆಯ್ಕೆ, ಭೂಮಿಯ ಭೌತಿಕ ಬದಲಾವಣೆ ಜೊತೆಗೆ ಕೃಷಿ ಪ್ರಕ್ರಿಯೆಗಳನ್ನು ಬದಲಾಯಿಸುತ್ತಿದ್ದಾರೆ.

ಗ್ರಾಮೀಣ ಸೇವೆಗಳ ಹೊಸ ಆರ್ಥಿಕತೆಯ ಏಳ್ಗೆಯು ವಾಣಿಜ್ಯ ಕೃಷಿ ಹರಡುವಿಕೆಯ ಕೊಂಡಿಯಾಗಿದೆ. ದೊಡ್ಡ ವ್ಯವಸಾಯಗಾರರು ಮತ್ತು ಗುತ್ತಿಗೆ ವ್ಯವಸಾಯಗಾರರು ಕೂಡ ಕೃಷಿ ಒಲವು ತೋರುವುದರಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಾರೆ ಮತ್ತು ಇತರರು ವ್ಯವಸಾಯದ ಸರಕುಗಳ ಚಿಲ್ಲರೆ ವ್ಯಾಪಾರದ ಅಂಗಡಿಗಳನ್ನು ಆರಂಭಿಸಿದ್ದು, ಹೊರಗಿನ ಮಾರುಕಟ್ಟೆ ಕಂಪನಿಗಳಿಗೆ ಸ್ಥಳೀಯ ಬೆಳೆಗಳನ್ನು ಖರೀದಿಸಿ ಮಾರಾಟ ಮಾಡುತ್ತಾರೆ. ಕೃಷಿಯ ಒಳಸುರಿ (ಇನ್‌ಪುಟ್) ಅಥವಾ ಕೃಷಿ ಸಲಕರಣೆಗಳಗಳಿಗೆ (ಟ್ರ್ಯಾಕ್ಟರ್, ಟಿಲರ್, ಜೆ.ಸಿ.ಬಿ. ಇತ್ಯಾದಿ) ಬಂಡವಾಳ ಹಾಕುತ್ತಾರೆ. ಇತರೆ ಗ್ರಾಮೀಣ ಸೇವೆಗಳಲ್ಲಿ ಎಲೆಕ್ಟ್ರಿಷಿಯನ್ಸ್, ನೀರಿನ ತಜ್ಞರು, ನೀರುಗಂಟಿ, ವಾಹನ ಚಾಲಕರು ಇನ್ನೂ ಮುಂತಾದವರು ಹೊಸ ವ್ಯಾಪಾರೀಕರಣದ ಕೃಷಿಯ ಆರ್ಥಿಕತೆಯ ಸೇವೆಗಳನ್ನು ಪೂರೈಸುತ್ತಿದ್ದಾರೆ. ಇವುಗಳಲ್ಲದೆ ಪಂಚಾಯಿತಿ ವಲಯದ ಹೆದ್ದಾರಿ (ರಾಷ್ಟ್ರೀಯ ಹೆದ್ದಾರಿ 209) ಬದಿಗಳಲ್ಲಿ ಕಿರಾಣಿ ಸಾಮಾನಿನ ಅಂಗಡಿಗಳು, ಹೋಟೆಲ್‌ಗಳು ತಲೆ ಎತ್ತಿವೆ. ಈ ಭಾಗದಲ್ಲಿ ಕೆಲಸಗಾರರಿಗೆ ದೊಡ್ಡ ಪ್ರಮಾಣದಲ್ಲಿ ಕೂಲಿಯನ್ನು ಹೆಚ್ಚಿಸಲಾಗಿದ್ದು ಜೀವನ ನಿರ್ವಹಣೆಗೆ ಸಮಸ್ಯೆಯಾಗಿಲ್ಲ.

**' ಹೊಸ ಗುತ್ತಿಗೆ ವ್ಯವಸಾಯ' ಮತ್ತು ವ್ಯವಸಾಯದ ಹೊಸ ಮಾದರಿಗಳ ಪರಿಚಯ**

ಈ ಅಧ್ಯಯನ ವರದಿಯು ಕರ್ನಾಟಕದ ಮಳೆನೆರಳಿನ ಪ್ರದೇಶಗಳಲ್ಲಿ ಹೊಸ ಗುತ್ತಿಗೆ ವ್ಯವಸಾಯ ಹೇಗೆ ಹರಡಿಕೊಂಡಿದೆ ಎಂಬುದನ್ನು ತಿಳಿಸುತ್ತದೆ. ಈ ವಲಯದಲ್ಲಿ 2010-11 ರಿಂದ ಹೊಸದಾಗಿ 'ಗುತ್ತಿಗೆ ವ್ಯವಸಾಯ' (ಲೀಸ್ ಅಗ್ರಿಕಲ್ಚರ್) ಹರಡಿಕೊಂಡಿದ್ದು ಮೊದಲಿಗೆ ಲಂಬಾಣಿ ಸಮುದಾಯದವರು ಹೊರಗಿನ ಹೊಸ ಬಂಡವಾಳಶಾಹಿ ಕೃಷಿಕರಿಗೆ ತಮ್ಮ ಭೂಮಿಯನ್ನು ಗುತ್ತಿಗೆ ನೀಡಿದರು. ಇದನ್ನು ನೋಡಿದ ಸೋಲಿಗರು ವಾಸಿಸುವ ಹಳ್ಳಿಗಳು ಮತ್ತು ಬಾನವಾಡಿ ಗ್ರಾಮದವರು ಹೊಸ ಬಂಡವಾಳಶಾಹಿ ಕೃಷಿಕರಿಗೆ ತಮ್ಮ ಭೂಮಿಯನ್ನು ಗುತ್ತಿಗೆ ನೀಡಲು ಶುರುಮಾಡಿದ್ದಾರೆ.

ಈ ರೀತಿಯ ಹೊಸ ಗುತ್ತಿಗೆ ವ್ಯವಸಾಯವನ್ನು ಮಾಡಲು ಬರುವವರು ಯಾರು ಎಂದರೆ ಕೇರಳದಿಂದ ಬಂದ ಬಂಡವಾಳಶಾಹಿ ಕೃಷಿಕರು. ಈ ಬಂಡವಾಳಶಾಹಿ ಕೃಷಿಕರೆಲ್ಲರೂ ಪುರುಷರಾಗಿದ್ದು, ಒಂದು ಗುಂಪಿನಲ್ಲಿ 4 ರಿಂದ 5 ಜನರಿರುತ್ತಾರೆ. ಇವರೆಲ್ಲರೂ ಸೇರಿ ಬೇರೆ, ಬೇರೆ ರಾಜ್ಯಗಳ ಕೃಷಿ ಯೋಗ್ಯ ಭೂಮಿಯನ್ನು ಹುಡುಕಿ, ಬಂಡವಾಳ ಹೂಡುತ್ತಾರೆ. ಏಕೆಂದರೆ ಈ ರೀತಿಯ ಬಂಡವಾಳಶಾಹಿ ಕೃಷಿಕರು ಈಗಾಗಲೇ ಕೇರಳದ ಭೂಮಿಯನ್ನು ಬರಿದುಮಾಡಿ ಬಂದಿದ್ದು, ಅಲ್ಲಿನ ಬಿಗಿ ಕಾನೂನಿಂದಾಗಿ ಹೊರ ರಾಜ್ಯಗಳಿಗೆ ಪ್ರವೇಶಿಸಿದ್ದಾರೆ. ಹೆಚ್ಚು ಮೌಲ್ಯವುಳ್ಳ ಬೆಳೆಗಳಾದ ಶುಂಠಿ, ಅರಿಶಿಣ, ಬಾಳೆ, ಆಯಾಯ ಋತುಕಾಲದ ತರಕಾರಿಗಳನ್ನು ಬೆಳೆಯಲು ಬೇಕಾದ ಫಲವತ್ತಾದ ಭೂಮಿ ಕರ್ನಾಟಕ ಮತ್ತು ತಮಿಳುನಾಡು ಪ್ರದೇಶಗಳಲ್ಲಿ ಲಭ್ಯವಾಗುತ್ತಿರುವುದು ಹಾಗೂ

ಈ ರಾಜ್ಯಗಳಲ್ಲಿ ಕೇರಳದ ಕೂಲಿಗಿಂತ ಕಡಿಮೆ ಇರವುದರಿಂದ ಕರ್ನಾಟಕದಲ್ಲಿ ಅವರ ಪ್ರವೇಶಿಸುವಿಕೆ ಹೆಚ್ಚಾಗಿದೆ. ಇವರಿಗೆ ಹೊಸ ಭೂಮಿಗೆ ಹೆಚ್ಚಿನ ಬಂಡವಾಳ ತೊಡಗಿಸುವುದು ಮತ್ತು ಭೂಮಿಯನ್ನು ಗುರುತಿಸುವ, ವ್ಯವಸಾಯ ಮಾಡುವ ಮತ್ತು ಬೆಳೆಗಳನ್ನು ಮಾರಾಟ ಮಾಡುವ ಜಾಲದ ಸಹಾಯವಿದೆ.

ಭೂಮಿಯ ಫಲವತ್ತತೆ ಆಧಾರದಲ್ಲಿ ಭೂ ಮಾಲಿಕನಿಗೆ ಎಕರೆಗೆ 10 ರಿಂದ 20 ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಕರ್ನಾಟಕದ ಬೇರೆ ಪ್ರದೇಶಗಳಲ್ಲಿ (ಹೆಗ್ಗಡದೇವನ ಕೋಟೆ, ಹುಣಸೂರು, ಪಿರಿಯಾಪಟ್ಟಣ, ಹಾಸನ, ಕೊಡಗು ಇನ್ನೂ ಮುಂತಾದವು) ಎಕರೆಗೆ 30 ಸಾವಿರದಿಂದ 1 ಲಕ್ಷದವರೆಗೂ ಗುತ್ತಿಗೆ ನೀಡಲಾಗುತ್ತಿದೆ. ಒಪ್ಪಂದದ ಕರಾರಿನ ಮೇಲೆ (ಬಹುತೇಕ ಒಪ್ಪಂದದ ಕರಾರು ಸರ್ಕಾರೇತರ ಕಾಗದ ಪತ್ರವಾಗಿರುತ್ತವೆ) 18 ತಿಂಗಳಿಗೆ ಭೂಮಿಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಾರೆ. ಗುತ್ತಿಗೆಯ ಕರಾರಿನಡಿ ಭೂಮಿಯ ಅಡ್ಡಿಯನ್ನು ನಿವಾರಿಸುವಿಕೆ, ವಿದ್ಯುತ್ ಸಂಪರ್ಕ, ಭೂಮಿ ಸಮತಟ್ಟ, ಕೊಳವೆ ಬಾವಿ ಹಾಕಿಸಿ ಹನಿ ನಿರಾವರಿ ಅಳವಡಿಕೆ ಮತ್ತು ಬೇಲಿ ನಿರ್ಮಾಣ ಮಾಡುವ ಇತ್ಯಾದಿ ಕೆಲಸಗಳಿಗೆ ಒಂದು ಎಕರೆಗೆ ರೂ 2 ರಿಂದ 3 ಲಕ್ಷ ರೂಪಯಿಗಳನ್ನು ಖರ್ಚು ಮಾಡುತ್ತಾರೆ. ಆರಂಭದ ವರ್ಷದಲ್ಲಿ (2010-11 ರಲ್ಲಿ) ಬಹುತೇಕ ಶುಂಠಿ ಮತ್ತು ಅರಿಶಿಣ ಬೆಳೆಯನ್ನು ಬೆಳೆದಿದ್ದು, ಆ ನಂತರದ ವರ್ಷಗಳಿಂದ ಬಾಳೆ, ಮುಸುಕಿನ ಜೋಳ (ಪಾಪ್‌ಕಾರ್ನ್/ಮೈಯಿಜ್) ಮತ್ತು ಕೆಲವು ತರಕಾರಿಗಳು, ಕಲ್ಲಂಗಡಿ, ಚಂಡುಮಲ್ಲಿಗೆಯನ್ನು ಬೆಳೆಯುತ್ತಿದ್ದಾರೆ. ಮಾರುಕಟ್ಟೆಯ ಬೆಲೆಯ ಏರಿಳಿತಗಳ ನಡುವೆಯೂ ಗುತ್ತಿಗೆದಾರನಿಗೆ ಒಂದು ಎಕರೆಗೆ 7 ರಿಂದ 8 ಲಕ್ಷ ಸಿಗುತ್ತದೆ.





**ಕಾಡಂಚಿನಲ್ಲಿ ಚಂಡು ಹೂ ಕೃಷಿ ಮತ್ತು ಶುಂಠಿ ತೆಗೆಯುತ್ತಿರುವ ಸೋಲಿಗ ಕಾರ್ಮಿಕರು**



**ಏಕ ಬೆಳೆ ಪದ್ಧತಿಗಳು – ಮುಸುಕಿನಜೋಳ ಮತ್ತು ಬಾಳೆ ಬೆಳೆಗಳು**

ಭೂಮಿ ನೋಡಿಕೊಳ್ಳುವ ಮೇಲ್ವಿಚಾರಕರು (ಎಲ್ಲರೂ ಪುರುಷರು) ಗುತ್ತಿಗೆ ಪಡೆದ ಭೂಮಿಯಲ್ಲಿ ಗುಡಿಸಲು ಕಟ್ಟಿಕೊಂಡು ಸರದಿಯಂತೆ ಉಳಿಯುತ್ತಾರೆ. ಇವರಿಗೆ ಭಾಷೆಯ ಮಧ್ಯವರ್ತಿಗಳಾಗಿ ಎರಡು ಭಾಷೆ ತಿಳಿದಿರುವ ಸ್ಥಳೀಯರು ಕೆಲಸ ನಿರ್ವಹಿಸುತ್ತಾರೆ. ಇವರು ತಮ್ಮ ಸ್ವಂತದ ಆಹಾರಕ್ಕಾಗಿ ಮರಗೆಣಸು, ಬದನೆ, ಟೊಮ್ಯಾಟೊ, ಮೆಣಸಿನಕಾಯಿ ಇತ್ಯಾದಿಗಳನ್ನು ಬೆಳೆದುಕೊಳ್ಳುತ್ತಾರೆ. ಗುತ್ತಿಗೆ ಅವಧಿ ಮುಗಿದ ತಕ್ಷಣ ಅವರು ಬಂಡವಾಳ ತೊಡಗಿಸಿದ ಬೇಲಿ, ಪೈಪ್‌ಗಳು, ಹನಿ ನೀರಾವರಿ ವಸ್ತುಗಳನ್ನು ವಾಪಸ್ಸು ತೆಗೆದುಕೊಂಡು ಆ ಭೂಮಿಯನ್ನು ಬಿಟ್ಟು, ಬೇರೊಂದು ಭೂಮಿಗೆ ಹೋಗುತ್ತಾರೆ. ಆದರೆ ಕೆಲವು ಗ್ರಾಮಗಳಲ್ಲಿ ಗುತ್ತಿಗೆ ಅವಧಿ ಮುಗಿದರೂ ಗುತ್ತಿಗೆ ಪಡೆದುಕೊಂಡಿದ್ದವರು ಭೂ ಮಾಲೀಕರಿಗೆ ತಿಳಿಯದ ಹಾಗೇ ಮತ್ತೊಬ್ಬರಿಗೆ ಗುತ್ತಿಗೆ ನೀಡುತ್ತಾರೆ. ಉದಾಹರಣೆಗೆ ಕುಳ್ಳೂರು ಗ್ರಾಮದ ಸೋಲಿಗರ ಭೂಮಿ.

ಉತ್ಪಾದನೆಯ ಅವಧಿಯಲ್ಲಿ ಸ್ಥಳೀಯ ಕೆಲಸಗಾರರ ಜೊತೆಗೆ ಭೂಮಿ ನೀಡಿದ ಮಾಲಿಕ ಕೂಡ ಕೆಲಸಗಾರರಾಗಿ ಬರುತ್ತಾರೆ. ಪ್ರಸ್ತುತದಲ್ಲಿ ವಯಸ್ಕ ಪುರುಷ ಕೆಲಸಗಾರರಿಗೆ ರೂ 250, ಮಹಿಳೆಯರಿಗೆ ರೂ 150 ರೂಪಾಯಿಗಳನ್ನು ನೀಡಲಾಗುತ್ತದೆ. ಮಕ್ಕಳಿಗೆ (ರಜಾ ದಿನಗಳು ಮತ್ತು ವಾರದ ರಜೆ ದಿನಗಳಲ್ಲಿ ಶಾಲೆಗೆ ಹೋಗುವ ಮಕ್ಕಳು ಸೇರಿದಂತೆ) ರೂ 100 ರಿಂದ 120 ರೂಪಾಯಿಗಳನ್ನು ನೀಡಲಾಗುತ್ತಿದೆ. ಮಕ್ಕಳನ್ನು ಉಪ್ಪು (ಯೂರಿಯಾ), ಪೋಟಾಸ್, ಡಿ.ಎ.ಪಿ. ಮುಂತಾದ ರಸಾಯನಿಕ ಗೊಬ್ಬರ ಹಾಕುವಾಗ, ಶುಂಠಿ, ಅರಿಶಿಣ ಮತ್ತು ಚೆಂಡುಹೂ ಕೀಳುವಾಗ, ಬಳಸಿಕೊಳ್ಳಲಾಗುತ್ತದೆ. ಭೂಮಿಯ ಇಲ್ಲಿ ಕೆಲಸ ಮಾಡುವವರಿಗೆ ಮಧ್ಯಾಹ್ನದ ಅವಧಿಯಲ್ಲಿ ಚಹಾ ಬಿಟ್ಟು ಬೇರೆ ಏನನ್ನು ನೀಡಲಾಗುತ್ತಿಲ್ಲ. ಅಲ್ಲದೆ ಕೃಷಿ ಉತ್ಪಾದನೆಯ (ಬೆಳೆದ ಯಾವುದೇ ಬೆಳೆಗಳನ್ನು,

ಹಸಿರು ತರಕಾರಿಗಳು ಅಥವಾ ಆಹಾರ ಪದಾರ್ಥಗಳು ಇತ್ಯಾದಿ) ಪೂರಕ ವಸ್ತುಗಳನ್ನು ಹಂಚಿಕೊಳ್ಳುವುದಿಲ್ಲ ಅಥವಾ ಕೆಲಸಗಾರರಿಗೆ ಕೊಡುವುದಿಲ್ಲ.

ಗುತ್ತಿಗೆ ಭೂಮಿಯ ಉತ್ಪಾದನೆಯ ಮಾದರಿಗಳು ಕೈಗಾರಿಕೆಗೆ ಹತ್ತಿರದಲ್ಲಿದ್ದು ಭೂಮಿ ಸಮತಟ್ಟು ಮಾಡಿ ಸುತ್ತ ಮುಳ್ಳು ತಂತಿಯನ್ನು ಬಹಳ ಅಚ್ಚುಕಟ್ಟಾಗಿ ಹಾಕಿ, ಅದರ ಅಂಚಿನಲ್ಲಿ ಸುತ್ತ ವಿದ್ಯುತ್ ಸೋಲಾರ್ ಸಾಲುಗಳನ್ನು ಬಿಡಲಾಗುತ್ತದೆ. ಕುಲಾಂತರಿ ತಳಿ (ಹೈ ಬ್ರೀಡ್ ವೆರೈಟಿ) ಬೀಜ ಮತ್ತು ಬೆಳೆಗಳನ್ನು ಹಾಕುತ್ತಿದ್ದು, ಅವುಗಳು ಬೇಗ ಬೆಳವಣಿಗೆಯಾಗಲು, ಹೆಚ್ಚು ಫಲವನ್ನು ನೀಡಲು ಹೆಚ್ಚು ಹೆಚ್ಚು ಪ್ರಮಾಣದ ರಸಾಯನಿಕ ಗೊಬ್ಬರ ಬಳಕೆ ಮತ್ತು ಕೀಟಬಾಧೆಗಳನ್ನು ನಿಯಂತ್ರಿಸಲು ವಿಪರೀತ ಕ್ರಿಮಿನಾಶಕಗಳನ್ನು ಬಳಸಲಾಗುತ್ತಿದೆ. ಸುಗ್ಗಿಯ ಕೊನೆಯಲ್ಲಿ ಈ ಕ್ಷೇತ್ರಕ್ಕೆ ಟ್ರಕ್ ಅಥವಾ ಲಾರಿಗಳು ಬಂದು ಉತ್ಪಾದನೆಯನ್ನು ತುಂಬಿಕೊಂಡು ತಮಿಳುನಾಡು ಅಥವಾ ಕೇರಳದ ಮಾರುಕಟ್ಟೆಗೆ ತೆಗೆದುಕೊಂಡು ಹೋಗುತ್ತವೆ. ಏಕೆಂದರೆ ಕರ್ನಾಟಕದಲ್ಲಿ ಇವುಗಳಿಗೆ ಮಾರುಕಟ್ಟೆ ವ್ಯವಸ್ಥೆ ಇಲ್ಲ.

**ಗುತ್ತಿಗೆ ವ್ಯವಸಾಯಕ್ಕೆ ಒಳಪಡುವ ಕಾರಣಗಳು**

ಜನರು ತಮ್ಮ ಭೂಮಿಯನ್ನು ಗುತ್ತಿಗೆ ನೀಡುತ್ತಿರುವುದಕ್ಕೆ ಕಾರಣಗಳೇನು ಎಂಬುದನ್ನು ತಿಳಿಯಲು ಬಾನವಾಡಿ ಗ್ರಾಮದ ಭೂಮಿ ಗುತ್ತಿಗೆ ನೀಡಿರುವ ಎಂಟು ಕುಟಂಬಗಳು ಮತ್ತು ಇತರೆ ಕುಟುಂಬಗಳ ಜೊತೆ ಚರ್ಚಿಸಲಾಗಿದೆ. ಈ ಚರ್ಚೆಯಲ್ಲಿ ತಿಳಿದುಬಂದ ವಿಷಯಗಳೆಂದರೆ ಗುತ್ತಿಗೆದಾರರು ಭೂಮಿಯನ್ನು ಅಭಿವೃದ್ಧಿಪಡಿಸಿ (ಭೂಮಿ ಸಮತಟ್ಟು, ಬೇಲಿ, ಬೋರ್ ಹಾಕಿಸುವುದು, ವಿದ್ಯುತ್ ಸಂಪರ್ಕ ಇತ್ಯಾದಿ) ಕೊಡುವುದು, ವ್ಯವಸಾಯ ಮಾಡಲು ಬೇಕಾದ ಬಂಡವಾಳ ಮತ್ತು ದೊಡ್ಡ, ದೊಡ್ಡ ಯಂತ್ರಗಳನ್ನು ಬಳಸಿಕೊಂಡು ನಮ್ಮಿಂದ ಮಾಡಲು ಸಾಧ್ಯವಿಲ್ಲ. ಹಾಗಾಗಿ ನಾವು ಭೂಮಿಯನ್ನು ಕೇರಳದವರಿಗೆ ಗುತ್ತಿಗೆ ನೀಡಿದ್ದೇವೆ ಎನ್ನುತ್ತಾರೆ. ಹಲವು ಕುಟುಂಬಗಳು ಗುರಿತಿಸಿದಂತೆ ಕೃಷಿ ಕೆಲಸಗಳಿಗೆ ಹೆಚ್ಚು ಖರ್ಚು ಮಾಡಬೇಕು ಎಂಬ ಕಾರಣಕ್ಕೆ ಅವರ ಭೂಮಿಯನ್ನು ಗುತ್ತಿಗೆ ನೀಡಿ ಹೊರಗುತ್ತಾರೆ. ಕುಳ್ಳೂರು ಗ್ರಾಮದ ಸೋಲಿಗ ಕುಟುಂಬಗಳ ಜೊತೆ ಚರ್ಚಿಸುವಾಗ ಅವರು ಸಹ ತಮ್ಮ ಭೂಮಿಯ ಅಭಿವೃದ್ಧಿಗಾಗಿ ಕೇರಳದವರಿಗೆ ಗುತ್ತಿಗೆ ನೀಡಿರುವುದಾಗಿ ತಿಳಿಸಿದ್ದಾರೆ.

ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಜನರು ಸ್ಪಷ್ಟವಾಗಿ ಹೇಳುವುದಿಲ್ಲ. ಆದರೆ ನಾವು ಕೆಲವು ಮುಖ್ಯವಾದ ಅಂಶಗಳನ್ನು ಪರಿಗಣಿಸುತ್ತೇವೆ. ವಾಸ್ತವಾಗಿ ಅವರ ಮಹತ್ವವಾದ ಅವಶ್ಯಕತೆಗಳನ್ನು ಕೃಷಿ ಕ್ಷೇತ್ರ ಪೂರ್ಣಗೊಳಿಸುವುದಿಲ್ಲ ಎಂಬುದು ಕೂಡ ಒಂದು ಕಾರಣವಾಗಿರುವುದರಿಂದ ತಮ್ಮ ಭೂಮಿಯನ್ನು ಗುತ್ತಿಗೆ ನೀಡಿ ಹೊರಹೋಗುತ್ತಾರೆ. ಇತ್ತೀಚಿನ ಬೆಳವಣಿಗೆಯಲ್ಲಿ ಪಡಿತರ ವ್ಯವಸ್ಥೆಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುತ್ತಿರುವ

ಪೌಷ್ಟಿಕ ಆಹಾರ ಮತ್ತು ದಿನ ಕೂಲಿ ಹೆಚ್ಚಾಗಿರುವುದರಿಂದ ಅವರಿಗೆ ಮೂಲಭೂತವಾಗಿ ಬೇಕಾದ ಆಹಾರ ಲಭ್ಯವಾಗುತ್ತಿದೆ. ಹಾಗಾಗಿ ಅವರಿಗೆ ಹೆಚ್ಚು ಹಣ ಬೇಕಾಗಿರುವುದು ಹೊಸ ಮನೆಗಳ ನಿರ್ಮಾಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಖರ್ಚುಗಳಿಗೆ. ಅಲ್ಲದೆ ತಮ್ಮ ಭೂಮಿಯನ್ನು ಗುತ್ತಿಗೆಗೆ ನೀಡುವುದರಿಂದ ಬರುವ ಆದಾಯದ ಜೊತೆಗೆ ಅದೇ ಭೂಮಿಯಲ್ಲಿ ಕೂಲಿಯು ಸಿಗುತ್ತದೆ ಎಂಬ ಕಾರಣದಿಂದ ಭೂಮಿಯನ್ನು ಗುತ್ತಿಗೆ ಕೊಡುತ್ತಿದ್ದಾರೆ. ಬಾನವಾಡಿಯ ಕೆಲವು ಮನೆಗಳು (8 ರಲ್ಲಿ 4) ವ್ಯವಸಾಯದಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ತೋರುತ್ತಿಲ್ಲ. ಅಲ್ಲದೆ ಹೊರಗಿನ ಹೊಸ ಅವಕಾಶಗಳಿಂದ ವಲಸೆ ಕಾರ್ಮಿಕರಾಗಿ ದುಡಿಯುವ (ವಿಶೇಷವಾಗಿ ಯುವಜನರಲ್ಲಿ) ಅವಕಾಶಗಳಿರುವುದರಿಂದ ಭೂಮಿ ಇರುವವರು ಗುತ್ತಿಗೆಗೆ ನೀಡುತ್ತಿದ್ದಾರೆ.

**ಗುತ್ತಿಗೆ ವ್ಯವಸಾಯದ ಪರಿಣಾಮಗಳು**

ಈ ಗುತ್ತಿಗೆ ಆಧಾರಿತ ವ್ಯವಸಾಯವು ಬಂಡವಾಳ ಆಧಾರಿತ ಉದ್ಯಮ ಮತ್ತು ವಾಣಿಜ್ಯ ಕೃಷಿಯನ್ನು ಪ್ರತಿನಿಧಿಸುತ್ತಿದ್ದು, ಸ್ಥಳೀಯ ಆರ್ಥಿಕತೆ ಮತ್ತು ಸಮಾಜದ ಮೇಲೆ ಯಾವ ರೀತಿಯ ಗುರುತರವಾದ ಪರಿಣಾಮಗಳನ್ನು ಬೀರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನಾವು ಅವಲೋಕಿಸಿದಂತೆ ತಕ್ಷಣ ಮತ್ತು ದೀರ್ಘಕಾಲಿಕ ಪರಿಣಾಮಗಳ ಸೂಚಕಗಳನ್ನು ಕೆಳಕಂಡ ಅಂಶಗಳ ಜೊತೆ ವಿವರಿಸಲಾಗಿದೆ.

**I. ಕೃಷಿ-ಪರಿಸರದ ನಮೂನೆಗಳಲ್ಲಿ ಬದಲಾವಣೆ**

ಬಿಳಿಗಿರಿ ರಂಗನಾಥ ದೇವಸ್ಥಾನದ ಅರಣ್ಯ ಪ್ರದೇಶದ ಸೂಕ್ಷ್ಮ ವಲಯದಲ್ಲಿ ವಾಸವಾಗಿದ್ದ ಸೋಲಿಗರನ್ನು ಒಕ್ಕಲೆಬ್ಬಿಸಿದ ಪರಿಣಾಮ ಪರಿಸರ ಮತ್ತು ಋತುಮಾನ ಆಧಾರಿತವಾಗಿದ್ದ ಅವರ ವ್ಯವಸಾಯವನ್ನು ಬೇರೆ ಮಾಡಲಾಗಿದೆ. ಅದರ ಜೊತೆ ಪ್ರಸ್ತುತ ಈ ಹೊಸ ಗುತ್ತಿಗೆ ವ್ಯವಸಾಯದ ಪರಿಚಯದಿಂದ ಮತ್ತೇ ಅವರ ಕೃಷಿ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತಿದೆ. ಸೋಲಿಗರ ಪ್ರದೇಶದಲ್ಲಿ ಈ ಮುಂಚಿನ ವ್ಯವಸಾಯದ ಮಾದರಿಗಳು ಮತ್ತು ವಿಧಾನಗಳು ಅಲ್ಲಿನ ಋತುಮಾನಕ್ಕೆ ಅನುಗುಣವಾಗಿದ್ದು, ಅರಣ್ಯ – ಕೃಷಿ, ಕೈತೋಟ ಅಥವಾ ಅರಣ್ಯ– ಪರಿಸರ ಕೃಷಿಯಾಗಿತ್ತು. ಅರಣ್ಯ ಮತ್ತು ಆ ಕ್ಷೇತ್ರದ ಜೊತೆಗಿನ ಅವರ ಸಂಬಂಧ ಗುರುತರವಾಗಿತ್ತು. ಅವರಲ್ಲಿದ್ದ ಸ್ಥಳೀಯ ಬೀಜ, ಬೆಳಗಳು ಮರ, ಗಿಡಗಳು ಮತ್ತು ಪ್ರಾಣಿ, ಪಕ್ಷಿಗಳ ಜ್ಞಾನವೂ ಸೇರಿದಂತೆ ತಮ್ಮ ಜೀವನೋಪಾಯ ಮತ್ತು ಪೋಷಣೆಯ ಕೌಶಲ್ಯಗಳನ್ನು ಹೊಂದಿದ್ದರು. ಅದಲ್ಲದೆ ಕಾಡಿನ ಉಪ ಉತ್ಪನ್ನಗಳಾದ ಪಾಸೆ (ಪಾಚಿ), ಜೇನು, ಗೆಣಸು, ನೆಲ್ಲಿ ಸಂಗ್ರಹ ಮತ್ತು ಕಮರಿ/ಸ್ಥಳಾಂತರ ಬೇಸಾಯ ಪದ್ಧತಿ ಮೂಲಕ ರಾಗಿ ಬೆಳೆ (ಸಿರಿಧಾನ್ಯಗಳು ಸೇರಿದಂತೆ) ಮತ್ತು ವಿವಿಧ ಬಗೆಯ ಬೀನ್ಸ್‌ಗಳನ್ನು ಬೆಳೆಯುತ್ತಿದ್ದರು. ಸೋಲಿಗರ ಆಳವಾದ ಅವರ ಜ್ಞಾನವಲಯವು ಪ್ರಜಾಸತಾತ್ಮಕವಾದ ಸಂಸ್ಕೃತಿಯಿಂದ ಬಂದದ್ದಾಗಿತ್ತು. ಉದಾಹರಣೆಗೆ ಎಲ್ಲೆ ಅಥವಾ ಗಡಿ ಮೂಲಕ ಸೋಲಿಗರು ಎಲ್ಲೆಲ್ಲಿ

ವಾಸಿಸುತ್ತಿದ್ದರೆಂಬುದು ಮತ್ತು ಕೃಷಿ ಆಚರಣೆಗಳು ಮತ್ತು ಸಾಮಾಜಿಕ ಜೀವನ ಪದ್ಧತಿ, ವಿಸ್ತಾರವಾದ ಅರಣ್ಯ ಭೂ ಪ್ರದೇಶದಲ್ಲಿ ಸಿಗುವ ಸಂಪನ್ಮೂಲಗಳ (ಪ್ರಾಣಿ ಮತ್ತು ಸಸ್ಯ ವರ್ಗ) ಬಳಕೆ ಮತ್ತು ಆಹಾರ ಸಂಗ್ರಹ, ಸಾಂಸ್ಕೃತಿಕವಾದ ಸಂರಕ್ಷಣೆ ಇವೇ ಮುಂತಾದ ಅಳತೆಗೋಲುಗಳು ಅವರ ಜ್ಞಾನ ವಲಯಗಳಾಗಿದ್ದವು. 1974 ರ ನಂತರ ಸೋಲಿಗರನ್ನು ಕಾಡಂಚಿಗೆ ಸ್ಥಳಾಂತರಿಸಿದರ ಪರಿಣಾಮ ಅವರ ಸ್ಥಳೀಯ ಜ್ಞಾನದ ನಷ್ಟವಾಗಿದೆ. ಅವರಲ್ಲಿದ್ದ ಮುಂಚಿನ ಒಣ ಬೇಸಾಯದ ಕೆಲವು ಮುಖ್ಯ ಅಂಶಗಳ ಬಳಕೆ ಮತ್ತು ಉಳಿಸುವಿಕೆಯ ಅವಶ್ಯಕತೆಯಿದೆ.

ಸೋಲಿಗರನ್ನು ಅವರ ಮೂಲ ನೆಲೆಯಿಂದ ಸ್ಥಳಾಂತರಿಸುವಾಗ ಪರಿಹಾರದ ಭಾಗವಾಗಿ ದೊರಕಿದ ಸ್ವಲ್ಪ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದಾರೆ. ಅವರು ಈ ಮೊದಲು ಒಂದೇ ಋತುಮಾನದಲ್ಲಿ ಬೆಳೆಯುವ ಬಹು ಬೆಳೆಗಳನ್ನು (ಸಿರಿಧಾನ್ಯಗಳು, ಕಾಳುಗಳು, ಎಣ್ಣೆ ಕಾಳುಗಳು) ಕೊಟ್ಟಿಗೆ ಗೊಬ್ಬರ (ಹಸು, ಮೇಕೆ ಸಗಣಿ) ಉಪಯೋಗಿಸಿ ಬೆಳೆಯುತ್ತಿದ್ದರು. ತಮ್ಮ ಸಂಪ್ರದಾಯಿಕ ವಿಧಾನಗಳ ಮೂಲಕ ಕೀಟಗಳು ಮತ್ತು ಬೆಳೆ ಪೀಡೆಗಳನ್ನು ನಿಯಂತ್ರಿಸುತ್ತಿದ್ದರು. ಆದರೆ ಪ್ರಸ್ತುತದಲ್ಲಿ ನಾವು ಅವಲೋಕಿಸಿದಂತೆ ರೈತರು ತಮ್ಮಲ್ಲಿ ಲಭ್ಯವಿರುವ ಕೊಟ್ಟಿಗೆ ಗೊಬ್ಬರವನ್ನು ಹೊರಗಿನವರಿಗೆ ಮಾರಾಟ ಮಾಡಿ ತಮ್ಮ ಭೂಮಿಗೆ ಯೂರಿಯ, ಡಿ.ಎ.ಪಿ., ಪೊಟಾಸ್ ಮುಂತಾದ ರಸಾಯನಿಕ ಗೊಬ್ಬರಗಳು ಹಾಗೂ ಹೆಚ್ಚಿನ ಕ್ರಿಮಿನಾಶಕಗಳನ್ನು ಬಳಸುತ್ತಿದ್ದಾರೆ. ಜೊತೆಗೆ ಕೊಳವೆ ಬಾವಿಗಳನ್ನು ಕೊರೆಸಿ ನೀರಾವರಿ ಬೆಳೆ ಬೆಳೆಯುತ್ತಿದ್ದಾರೆ. ಹೀಗೆ ವ್ಯವಸಾಯದಲ್ಲಿ ಹೊರಗಿನ ಹೆಚ್ಚುವರಿ ಜ್ಞಾನವನ್ನು ಪರಿಚಯಿಸುತ್ತಿರುವುದರಿಂದ ಸೋಲಿಗರಲ್ಲಿರುವ ಸ್ಥಳೀಯ ಜ್ಞಾನವನ್ನು ಮತ್ತಷ್ಟು ದೂರಕ್ಕೆ ತಳ್ಳಿದೆ.





**ತಮ್ಮಲ್ಲಿರುವ ಕೊಟ್ಟಿಗೆ ಗೊಬ್ಬರ ಮಾರಿ, ಬೆಳೆಗಳಿಗೆ ಬಳಸುವ ಡಿ.ಎ.ಪಿ. ಮತ್ತು ಯೂರಿಯಾ**

**ಜೋಳಕ್ಕೆ ಹಾಕಿರುವ ಯೂರಿಯಾ, ಒಬ್ಬ ರೈತ 01 ವರ್ಷದಲ್ಲಿ 02 ಎಕರೆ ಭೂಮಿಗೆ ಬಳಸಿದ 30ಕ್ಕೂ ಹೆಚ್ಚು ಕ್ರಿಮಿನಾಶಕ ಹಾಗೂ ಗ್ರೋಥ್ ಹಾರ್ಮೋನ್ಸ್**

ಈಗಿನ ಗುತ್ತಿಗೆ ವ್ಯವಸಾಯದ ಉದ್ದೇಶ ವ್ಯವಸಾಯದಲ್ಲಿ ಬಂಡವಾಳ ಹೂಡಿಕೆ ಮಾಡಿ, ಭೂಮಿಯಿಂದ ಹೆಚ್ಚು ಹೆಚು ಉತ್ಪನ್ನಗಳನ್ನು ಹೊರತೆಗೆಯುವುದು. ಅದಕ್ಕಾಗಿ ಹೆಚ್ಚುವರಿ ಒಳಸುರಿಗಳನ್ನು (ರಸಾಯನಿಕ ಗೊಬ್ಬರ, ಕ್ರಿಮಿನಾಶಕ, ಕುಲಾಂತರಿ ಬಿತ್ತನೆ-ಬೀಜನಗಳನ್ನು (ಹೈಬ್ರೀಡ್) ಹಾಕಲಾಗುತ್ತದೆ ಮತ್ತು ದೊಡ್ಡ ಪ್ರಮಾಣದ ಯಂತ್ರ ಮತ್ತು ತಂತ್ರಜ್ಞಾನದ ಬಳಕೆ ಮಾಡಲಾಗುತ್ತದೆ. ಇದರಿಂದ ಸ್ಥಳೀಯ ಪರಿಸರದಲ್ಲಿ ಗುರುತರವಾದ ಬದಲಾವಣೆಗಳು ಕಂಡುಬರುತ್ತವೆ. ವ್ಯವಸಾಯದ ಭೂಮಿಯಲ್ಲಿ ಮಳೆ ನೀರನ್ನು ಹಿಡಿದಿಡುವ ಮತ್ತು ಮಳೆಯಲ್ಲಿ ಮಣ್ಣು ಕೊಚ್ಚು ಹೋಗದ ಹಾಗೇ ನಿರ್ಮಿಸಲಾಗಿದ್ದ ಬದುಗಳನ್ನು ಜೆಸಿಬಿ ಯಂತ್ರದಿಂದ ತೆಗೆದು ಹಾಕಿ ಭೂಮಿ ಸಮತಟ್ಟು ಮಾಡಿ, ಸ್ಥಳೀಯವಾಗಿ ಬೆಳೆದಿದ್ದ ವೈವಿಧ್ಯಮಯ ಮರ, ಗಿಡಗಳನ್ನು ತೆಗೆದುಹಾಕಿ ಸ್ವಚ್ಚಗೊಳಿಸಿ ಭೂಮಿಯ ರಚನೆಯನ್ನೇ ಬದಲಾಯಿಸಲಾಗುತ್ತಿದೆ. ಭೂಮಿಯ ಸುತ್ತಲೂ ಬೇಲಿ ನಿರ್ಮಾಣ ಮಾಡಿ ಬೋರ್‌ವೆಲ್‌ಗಳನ್ನು ಹಾಕಿಸುವ ಮೂಲಕ ಬೃಹತ್ ಪ್ರಮಾಣದ ನೀರನ್ನು ಹೊರತೆಗೆಯಲಾಗುತ್ತಿದೆ. ವ್ಯವಸಾಯಕ್ಕೆ ಟ್ರ್ಯಾಕ್ಟರ್ ಬಳಸುತ್ತಿದ್ದು, ಅಧಿಕ ರಸಾಯಿನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳ ಬಳಕೆಯೊಂದಿಗೆ ವಾಣಿಜ್ಯ ಬೆಳೆಗಳಾದ ಏಕ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇದರಿಂದ ಮಣ್ಣು ಮತ್ತು ಪರಿಸರ ಹಾಳಾಗುತ್ತಿದ್ದು ಸ್ಥಳೀಯ ವೈವಿಧ್ಯತೆಯನ್ನು ಕಳೆದುಕೊಳ್ಳಲಾಗುತ್ತಿದೆ. ಈಗಾಗಲೇ ಕಾಡಿನಲ್ಲಿ ಗಿಡಮೂಲಿಕೆ ಸಸ್ಯಗಳು, ಗೆಡ್ಡೆ, ಗೆಣಸು, ಹುಲ್ಲು ಬೆಳೆಯದ ಹಾಗೇ ಲಾಂಟಾನಾ ಇಡಿ ಕಾಡನ್ನು ವ್ಯಾಪಿಸಿದ್ದು, ಗಂಭೀರವಾದ ಹೊಡೆತವನ್ನು ನೀಡಿದೆ.



ಬದುಗಳಿದ್ದ ಭೂಮಿ ಸಮತಟ್ಟು ಮಾಡಿರುವುದು



ಅಂತರ್ಜಲ ಬರಿದು ಮಾಡುವ ಟೂಬ್‌ವೆಲ್



ಗುತ್ತಿಗೆ ಭೂಮಿಯಲ್ಲಿ ಸ್ಪಿಂಕ್ಲರ್ ಅಳವಡಿಕೆ



ಶುಂಠಿ ಬೆಳೆಗಾಗಿ ಹುಣಸೇ ಮರವನ್ನೇ ತೆಗೆದಿರುವುದು

## II. ಆಹಾರ ಸಂಸ್ಕೃತಿ ಮತ್ತು ಆಹಾರ ಭದ್ರತೆಯನ್ನು ಅಳಿಸುವಿಕೆ

ಸೋಲಿಗರ ಆಹಾರ ಸಂಸ್ಕೃತಿ ಮತ್ತು ಅವರು ಅನುಸರಿಸುತ್ತಿದ್ದ ಪಥ್ಯ ಅಥವಾ ಗೊತ್ತು ಮಾಡಿದ ಆಹಾರಕ್ರಮ ಈಗ ಇಲ್ಲವಾಗಿದೆ. ಪಡಿತರ ಆಹಾರ ಬಂದ ನಂತರ ಎಲ್ಲರೂ ಅಕ್ಕಿಯನ್ನು ದಿನನಿತ್ಯದ ಊಟದಲ್ಲಿ ಬಳಸುತ್ತಿದ್ದು ಅಪೌಷ್ಠಿಕತೆ ಸಮಸ್ಯೆಗಳು ಹೆಚ್ಚಾಗಿದೆ. ಹಿಂದೆ ಅವರಿಗೆ ವ್ಯವಸಾಯ ಮಾಡದೆ ಆಹಾರಕ್ಕೆ ಪೂರಕವಾಗಿದ್ದ (ಅನ್‌ಕಲ್ಟಿವೆಟೆಡ್) ವಿವಿಧ ಬಗೆಯ ಹಸಿರು ಸೊಪ್ಪು, ಗೆಡ್ಡೆ-ಗೆಣಸು, ಜೇನು ಇತ್ಯಾದಿ ಆಹಾರಗಳ ಬಳಕೆ ಬಹಳ ಕಡಿಮೆಯಾಗಿದೆ. ಅರಣ್ಯದೊಳಗೆ ಬೇಟೆಯಾಡುವುದನ್ನು ನಿಷೇಧಿಸಿರುವುದರಿಂದ ಪ್ರಸ್ತುತ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಮಾಂಸ ಆಹಾರ ಸಿಗುತ್ತಿಲ್ಲ. ಹಾಗಾಗಿ

ಆದಿವಾಸಿ ಸಮುದಾಯಗಳಲ್ಲಿ (ವಿಶೇಷವಾಗಿ ಮಹಿಳೆ ಮತ್ತು ಮಕ್ಕಳಲ್ಲಿ) ಹೆಚ್ಚಿನ ಅಪೌಷ್ಟಿಕತೆ ಮತ್ತು ಅನಾರೋಗ್ಯದ ಸಮಸ್ಯೆಗಳು ಕಂಡು ಬರುತ್ತಿವೆ. ಇಂತಹ ಸನ್ನಿವೇಶದಲ್ಲಿ ಇರುವ ಭೂಮಿಯನ್ನು ಗುತ್ತಿಗೆ ವ್ಯವಸಾಯಕ್ಕೆ ನೀಡಿದರೆ ಅವರ ಆರೋಗ್ಯದ ಮೇಲೆ ಇನ್ನಷ್ಟು ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗಿದೆ. ಕೃಷಿಯಲ್ಲಿ ವಿಪರೀತ ಕ್ರಿಮಿನಾಶಕ ಮತ್ತು ರಸಾಯನಿಕಗಳ ಬಳಕೆಯಿಂದ ಸ್ಥಳೀಯವಾಗಿ ಸಿಗುತ್ತಿದ್ದ ಮತ್ತು ವ್ಯವಸಾಯ ಮಾಡದ ಆಹಾರ ನಷ್ಟವಾಗಿದೆ. ಹಾಗೆಯೆ ಕೃಷಿಯಲ್ಲಿ ವಾಣಿಜ್ಯ ಬೆಳೆಗಳಾದ ಏಕ ಬೆಳೆ ಕಾರಣದಿಂದಾಗಿ ಅವರ ಆಹಾರಕ್ಕೆ ಪೂರಕವಾಗಿದ್ದ ವಿವಿಧ ರೀತಿಯ ಬೀನ್ಸ್, ಗೆಣಸು, ಕುಂಬಳ/ಸೋರೆಕಾಯಿ ಮುಂತಾದ ಆಹಾರಗಳ ನಷ್ಟವಾಗಿದೆ. ಇದರಿಂದ ಈಗಾಗಲೇ ಅಪೌಷ್ಠಿಕತೆ, ರಕ್ತಹೀನತೆ ಸಮಸ್ಯೆಗಳಿಂದ ಬಳಲುತ್ತಿರುವ ಈ ಸಮುದಾಯದ ಜನರು ಮತ್ತಷ್ಟು ಅನಾರೋಗ್ಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಕೃಷಿಯಲ್ಲಿನ ವಾಣಿಜ್ಯ ಬೆಳೆಗಳು ಮತ್ತು ಮಿತಿಮೀರಿದ ರಸಾಯನಿಕ ಮತ್ತು ಕ್ರಿಮಿನಾಶಕಗಳ ಬಳಕೆಯಿಂದ ಆಗುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ ಇಂದು ವಿಶ್ವದಾದ್ಯಂತ ಚರ್ಚೆಗಳಾಗುತ್ತಿದೆ. ಹಾಗಾಗಿ ವಿಶ್ವವನ್ನು ಕಾಡುತ್ತಿರುವ ಆಹಾರ ಸುರಕ್ಷತೆ ಬಗ್ಗೆ ಈ ಕೆಳಕಂಡ ವಿಶೇಷ ಸೂಚನೆಯನ್ನು ಅವಲೋಕಿಸುವುದು.

**ವಿಶೇಷ ಸೂಚನೆ :** 'ಆಹಾರದ ಸುರಕ್ಷತೆ ಕೊರತೆಯಿಂದ ವಿಶ್ವದಾದ್ಯಂತ ಮಕ್ಕಳು ಸೇರಿದಂತೆ ಪ್ರತಿ ವರ್ಷ 22 ಲಕ್ಷ ಜನರು ಸಾವನ್ನಪ್ಪುತ್ತಿದ್ದಾರೆ. ಆಹಾರದಲ್ಲಿನ ಬ್ಯಾಕ್ಟೀರಿಯಾ, ವೈರಸ್, ಪರಾವಲಂಬಿಗಳು, ರಸಾಯನಿಕಗಳು, ಕಲಬೆರಕೆ ಹಾಗೂ ಇತರೆ ಅಂಶಗಳು ಅತಿಸಾರ ಮತ್ತು ಕ್ಯಾನ್ಸರ್ ಸೇರಿದಂತೆ ಸುಮಾರು 200 ಬಗೆಯ ರೋಗಗಳನ್ನು ತರುತ್ತವೆ. ಆಗ್ನೇಯ ಏಷ್ಯಾದಲ್ಲಿ ಅಸುರಕ್ಷಿತ ಆಹಾರಕ್ಕೆ ಪ್ರತಿ ವರ್ಷ ಬಲಿಯಾಗುತ್ತಿರುವ ಮಕ್ಕಳ ಸಂಖ್ಯೆ 7 ಲಕ್ಷ. 2014 ರಲ್ಲಿ ಪತ್ತೆಯಾದ ಆಹಾರ ಕಲಬೆರಕೆ ಸಂಬಂಧಿ ರೋಗಗಳು 3006, ಕಳೆದ 50 ವರ್ಷಗಳಲ್ಲಿ ಕೀಟನಾಶಕಗಳು ಮತ್ತು ರಸಗೊಬ್ಬರಗಳ ಬಳಕೆ ವಿಶ್ವದಲ್ಲಿ 170 ಪಟ್ಟು ಹೆಚ್ಚಾಗಿದೆ. ಇದು ಆಹಾರ ಸರಪಳಿ ಮತ್ತು ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ' ಎಂದು ತಜ್ಞರು ಎಚ್ಚರಿಸಿದ್ದಾರೆ (ಪ್ರಜಾವಾಣಿ, ಏಪ್ರಿಲ್ 07, 2015, ಪು–8).

### III. ಕೃಷಿಯ ಸಾಮಾಜಿಕ ರಚನೆಯಲ್ಲಿ ಸಂಕೀರ್ಣತೆ ಹೆಚ್ಚಾಗುವಿಕೆ

ಈಗಾಗಲೇ ಸಂಕೀರ್ಣತೆಯಿಂದ ಕೂಡಿರುವ ಕೃಷಿ ಸಾಮಾಜಿಕ ರಚನೆಯಲ್ಲಿ ಈ ಹೊಸ ಗುತ್ತಿಗೆ ವ್ಯವಸಾಯವು ಪ್ರವೇಶಿಸುವಿಕೆಯಿಂದ ಸಂಕೀರ್ಣತೆ ಮತ್ತಷ್ಟು ವಿಸ್ತರಣೆಯಾಗಿದೆ. ಕೆಳಕಂಡ ವಿಷಯಗಳ ಮೂಲಕ ಕೃಷಿ ಸಾಮಾಜಿಕ ರಚನೆಯನ್ನು ತಿಳಿಯಬಹುದಾಗಿದೆ.

1. **ಭೂ ರಹಿತ ಕೂಲಿಕಾರರು:** ಇವರಿಗೆ ಯಾವುದೇ ಭೂಮಿ ಇಲ್ಲ. ಇವರು ಕೃಷಿ ಕೂಲಿಕಾರರಾಗಿ, ಋತುಮಾನದ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಕೂಲಿಗಾಗಿ ಕೇರಳ, ತಮಿಳುನಾಡು ಕಡೆ ವಲಸೆ ಹೋಗುತ್ತಾರೆ.

2. **ಭೂಮಿ ಇರುವವರು ಆದರೆ ಗುತ್ತಿಗೆಗೆ ನೀಡಿರುವವರು :** ಈ ಕುಟುಂಬಗಳು ವಾರ್ಷಿಕವಾಗಿ ಇಂತಿಷ್ಟು ಹಣ ಎಂದು ನಿಗಧಿಪಡಿಸಿ ಭೂಮಿಯನ್ನು ಗುತ್ತಿಗೆ ನೀಡುತ್ತಾರೆ.

3. **ಸ್ವಂತ ವ್ಯವಸಾಯ ಮಾಡುವವರು:** ಇವರಿಗೆ ಸ್ವಂತ ಭೂಮಿ ಇದ್ದು, ಅವಶ್ಯಕತೆ ಇದ್ದಾಗ ಕುಟುಂಬದವರ ಜೊತೆ ಹೊರಗಿನವರಿಗೆ ಕೂಲಿಯನ್ನು ನೀಡಿ ಕೆಲಸ ಮಾಡಿಸಿಕೊಳ್ಳುತ್ತಾರೆ.

4. **ವ್ಯವಸಾಯ ಮಾಡದ ಕೃಷಿಕರು:** ಇವರು ವಾಸ್ತವಾಗಿ ವ್ಯವಸಾಯ ಮಾಡದೆ ಇನ್ನೊಬ್ಬರಿಗೆ ವಾರ (ಹಂಚಿಕೆ ಆಧಾರದಲ್ಲಿ)ಕ್ಕೆ ತಮ್ಮ ಭೂಮಿ ನೀಡುತ್ತಾರೆ.

5. **ಭೋಗ್ಯದ ಕರಾರು ಕೃಷಿಕರು:** ಇವರಿಗೆ ಸ್ವಂತ ಭೂಮಿ ಇಲ್ಲ. ಇವರು ಬೇರೊಬ್ಬರ ಭೂಮಿಯನ್ನು 2–3 ವರ್ಷಗಳಿಗೆ ಭೋಗ್ಯದ ಕರಾರು ಮಾಡಿಸಿಕೊಂಡು ವ್ಯವಸಾಯ ಮಾಡುತ್ತಾರೆ.

6. **ಸ್ವಂತ ಭೂಮಿ ಹೊಂದಿರುವ ಕೃಷಿಕರು ಮತ್ತು ಕೂಲಿಕಾರರು:** ಇವರು ಸ್ವಂತ ಭೂಮಿಯನ್ನು ಮಾಡಿ, ಹೊರಗೆ ಕೂಲಿ ಕೆಲಸವನ್ನು ಮಾಡುತ್ತಾರೆ. ಇದರಿಂದ ಅವರಿಗೆ ವ್ಯವಸಾಯದ ಕೆಲಸಗಳಿಗೆ ಹೆಚ್ಚುವರಿಯಾದ ಆದಾಯ ಸಿಗುತ್ತದೆ.

7. **ಸ್ವಂತ ಕೃಷಿ ಜೊತೆಗೆ ಹೊರಗಿ ಇತರೆ ಆದಾಯದ ಮೂಲ:** ಇವರು ತಮ್ಮ ಭೂಮಿಯ ಆದಾಯದ ಜೊತೆಗೆ ವ್ಯವಸಾಯೇತರ ಕೆಲಸಗಳಿಂದ ಬರುವ ಆದಾಯವನ್ನು ಹೊಂದಿರುತ್ತಾರೆ.

8. **ಸ್ವಂತ ಕೃಷಿಕರು ಮತ್ತು ಗುತ್ತಿಗೆ ಮಾಡುವವರು:** ತಮ್ಮ ಸ್ವಂತ ಭೂಮಿಯನ್ನು ಮಾಡುವುದರ ಜೊತೆಗೆ ಬೇರೆಯವರ ಭೂಮಿಯನ್ನು ಗುತ್ತಿಗೆ ತೆಗೆದುಕೊಂಡು ಮಾಡುತ್ತಾರೆ.

9. **ಬೆಳೆಗಳನ್ನು ಹಂಚಿಕೊಳ್ಳುವ ಕೃಷಿಕರು:** ಭೂಮಿ ಇಲ್ಲದವರು ಭೂಮಿ ಇರುವವರ ಹತ್ತಿರ ಭೂಮಿ ಪಡೆದು ವ್ಯವಸಾಯ ಮಾಡುತ್ತಾರೆ. ಇವರು ವ್ಯವಸಾಯಕ್ಕೆ ತಗಲುವ ಖರ್ಚು–ವೆಚ್ಚಗಳನ್ನು

ಸಮ ಪ್ರಮಾಣದಲ್ಲಿ ಹಾಕಿ, ಬೆಳೆಯನ್ನು ಸಮವಾಗಿ ಹಂಚಿಕೊಳ್ಳುತ್ತಾರೆ. ಒಂದು ವೇಳೆ ಭೂ ಮಾಲಿಕರಿಗೆ ವ್ಯವಸಾಯದ ಸಂದರ್ಭದಲ್ಲಿ ಸಮ ಖರ್ಚು ಕೊಡಲು ಸಾಧ್ಯವಾಗದಿದ್ದರೆ, ಭೂಮಿ ಮಾಡುವ ವ್ಯಕ್ತಿ ಹೊರಗಿನವರಿಂದ ಸಾಲ ಪಡೆದು ವ್ಯವಸಾಯ ಮಾಡಿ, ಬೆಳೆ ಹಂಚಿಕೆ ಸಂದರ್ಭದಲ್ಲಿ, ಅಸಲು ಮತ್ತು ಬಡ್ಡಿ ಕಳೆದು, ಉಳಿದುದ್ದನ್ನು ಸಮವಾಗಿ ಹಂಚಿಕೊಳ್ಳುತ್ತಾರೆ.

ಹೀಗೆ ಕೃಷಿ ಸಂರಚನೆಯ ಸಂಕೀರ್ಣತೆಯನ್ನು ಬೇರೆ ಬೇರೆ ಹಂತಗಳಲ್ಲಿ ಗುರುತಿಸಬಹುದಾಗಿದೆ. ಒಂದೇ ಸಮುದಾಯದಲ್ಲಿ 09 ರೀತಿಯ ಕೃಷಿ ರಚನೆಗಳಿದ್ದು, ಅವರಲ್ಲೇ ಇರುವ ಸ್ವಲ್ಪ ಭೂಮಿ ಚೂರು ಚೂರಾಗಿದೆ (ಸಣ್ಣ ಸಣ್ಣ ಹಿಡುವಳಿಯಾಗಿ). ಸೋಲಿಗರಲ್ಲೇ ಸಾಮಾಜಿಕ ಸಂಬಂಧಗಳ ನಡುವೆ, ಆರ್ಥಿಕ ಸ್ಥಿತಿಯಲ್ಲಿ ಅಂತರ ಹೆಚ್ಚಾಗುತ್ತಿದ್ದು, ಪ್ರಸ್ತುತ ಅವರ ನಡುವೆ ಸಣ್ಣ ಪ್ರಮಾಣದಲ್ಲಿ ಆರ್ಥಿಕ ವ್ಯತ್ಯಾಸಗಳು ಕಂಡುಬರುತ್ತಿವೆ. ಮೊದಲು ಕಾಡಿನಲ್ಲಿದ್ದಾಗ ಯಾರಿಗೂ ಸ್ವಂತ ಭೂಮಿ ಅಂತಾ ಇರಲಿಲ್ಲ. ಒಡೆತನ ಸಾಮೂಹಿಕವಾಗಿದ್ದು ಅವರಿಗೆ ಬೇಕಿದ್ದ ಕಡೆ, ಅವಶ್ಯಕತೆ ಇದ್ದಷ್ಟು ಭೂಮಿಯಲ್ಲಿ ಬೇಕಾದುದ್ದನ್ನು ಬೆಳೆದುಕೊಳ್ಳುತ್ತಿದ್ದರು. ಆದರೆ 1974 ರಲ್ಲಿ ಅವರ ಮೂಲ ಸ್ಥಳದಿಂದ ಸ್ಥಳಾಂತರಿಸಿ ಕೆಲವರಿಗೆ ನೀಡಿದ ಸ್ವಲ್ಪ ಪ್ರಮಾಣದ ಭೂಮಿ ಒಡೆತನದೊಂದಿಗೆ ಸ್ವಂತದ ಕಲ್ಪನೆ ಬೆಳೆಯಿತು. ಹಾಗೆಯೇ ಹಲವರಿಗೆ ಭೂಮಿ ಇಲ್ಲದೆ ಕೂಲಿ ಕೆಲಸಗಾರರಾಗಿ ಉಳಿಯಬೇಕಾಯಿತು. ಅದರ ಜೊತೆ ಈ ಹೊಸ ಗುತ್ತಿಗೆ ವ್ಯವಸಾಯದ ಪ್ರಭಾವ ಹಳ್ಳಿಯಲ್ಲಿ ಜನರ ನಡುವೆ ವ್ಯತ್ಯಾಸಗಳನ್ನು ಹುಟ್ಟುಹಾಕಿದ್ದು, ಬಂಡವಾಳ ಮತ್ತು ದೊಡ್ಡ ದೊಡ್ಡ ಯಂತ್ರಗಳಿದ್ದರೆ ಮಾತ್ರ ವ್ಯವಸಾಯ ಮಾಡಲು ಸಾಧ್ಯ ಎಂಬ ಮನೋಭಾವ ಹುಟ್ಟಿಹಾಕಿದೆ. ಬಾನವಾಡಿ ಗ್ರಾಮದ ಜನರ ಜೊತೆ 2006 ರ ಅರಣ್ಯ ಹಕ್ಕು ಕಾಯಿದೆ ಕುರಿತು ಮಾತನಾಡಿದರೆ ಬಹುತೇಕರಿಗೆ ಅದು ಏನು ಎಂದು ತಿಳಿದಿಲ್ಲ. ಈ ಬಗ್ಗೆ ಅರಣ್ಯ ಇಲಾಖೆ ಅಥವಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳು ಜನರಿಗೆ ಸಂಪೂರ್ಣ ತಿಳುವಳಿಕೆ ನೀಡಿಲ್ಲ. ಹಾಗಾಗಿ ಈ ಕಾಯಿದೆಯಡಿ ವೈಯಕ್ತಿಕ ಹಾಗೂ ಸಾಮೂಹಿಕ ಹಕ್ಕುಗಳಿದ್ದರೂ ಆ ಹಕ್ಕುಗಳನ್ನು ಚಲಾಯಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಎಲ್ಲರಿಗೂ ಸಾಧ್ಯವಾಗಿಲ್ಲ. ನಾವು ಅವಲೋಕಿಸಿದಂತೆ ಸರ್ಕಾರದ ಹಲವು ಕಾರ್ಯಕ್ರಮಗಳು ಮತ್ತು ಯೋಜನೆಗಳಿದ್ದರೂ ಅವುಗಳನ್ನು ಪಡೆದುಕೊಳ್ಳಲು ಜನರು ಮುಂದೆ ಬಂದು ಕೇಳುತ್ತಿಲ್ಲ. ಉದಾಹರಣೆಗೆ ಬೇಸಿಗೆ ಮತ್ತು ಉತ್ಪಾದನೆಯಿಲ್ಲದ ಸಂದರ್ಭಗಳಲ್ಲಿ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ (ಎಂ.ಎನ್.ಆರ್.ಇ.ಜಿ.) ಯೋಜನೆಯಡಿ ಗ್ರಾಮ ಪಂಚಾಯಿತಿ ಕೆಲಸ ನೀಡಬೇಕಿದ್ದರೂ ಕೆಲಸ ಕೇಳಿ ಪಡೆದುಕೊಳ್ಳಲು ಆಗುತ್ತಿಲ್ಲ. ಕಾರಣ ಸ್ಥಳೀಯ ನಾಯಕತ್ವದ ಕೊರತೆ ಮತ್ತು ಪ್ರತಿನಿಧಿಸುವಿಕೆ ಇಲ್ಲದಿರುವುದು. ಇದ್ದರೂ ಈಗ ಅವರೇ ಗುತ್ತಿಗೆದಾರರಾಗಿ ಅಥವಾ ಗುತ್ತಿಗೆದಾರರ ಪರವಾಗಿದ್ದು ಸಮುದಾಯದ ಅವಶ್ಯಕತೆಗೆ ಸ್ಪಂದಿಸುತ್ತಿಲ್ಲ. ಹಾಗಾಗಿ ಕಳೆದ 3-4 ವರ್ಷಗಳಿಂದಲ್ಲೂ ಜನರಿಗೆ ಎಂ.ಎನ್.ಆರ್.ಇ.ಜಿ. ಕೆಲಸಗಳನ್ನು ನೀಡದೆ ಜೆ.ಸಿ.ಬಿ. ಮತ್ತು ಟ್ರ್ಯಾಕ್ಟರ್ ಬಳಸಿ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಕೆಲವು ಸಲ ಬೋಗಸ್ ಬಿಲ್‌ಗಳ ಮೂಲಕ ಕೆಲಸ ಮಾಡಿಸಿರುವುದಾಗಿ ತೋರಿಸಲಾಗುತ್ತಿದೆ. ಪಂಚಾಯಿತಿಯಲ್ಲಿ ಮನೆಗಳ ಫಲಾನುಭವಿಯಾಗಿ ಆಯ್ಕೆಯಾದ ವ್ಯಕ್ತಿಗೆ ತನ್ನ ಮನೆ ನಿರ್ಮಾಣದ ಬಿಲ್ ಪಡೆಯಲು

ಪಂಚಾಯತ್ ಸದಸ್ಯರಿಂದ ಹಿಡಿದು, ಅಧಿಕಾರಿಗಳವರೆಗೆ ಹಣ ನೀಡಬೇಕಾಗಿದೆ. ಹೀಗೆ ಭ್ರಷ್ಟಚಾರವಿದ್ದರೂ ಭ್ರಷ್ಟಚಾರವನ್ನು ಎದುರಿಸಲು ಯಾರಿಗೂ ಆಗುತ್ತಿಲ್ಲ. ಗುತ್ತಿಗೆ ವ್ಯವಸಾಯಗಾರರು ಇತರೆ ಸ್ಥಳೀಯ ವಾಣಿಜ್ಯ ಕೃಷಿಕರ ಜೊತೆ ಸ್ಪರ್ಧೆಯಿಂದಾಗಿ ಎಲ್ಲಿ ತಮಗೆ ಭೂಮಿ ಅವಶ್ಯಕತೆ ಇದಿಯೋ ಅಲ್ಲಿಗೆ ಹೆಚ್ಚಿನ ಹಣ ನೀಡಿ ಭೂಮಿಯನ್ನು ಗುತ್ತಿಗೆ ಪಡೆದುಕೊಳ್ಳುತ್ತಾರೆ.

## IV. ಕೆಲಸದ ಹಂಚಿಕಯಲ್ಲಿ ಭಾಗಿದಾರರಾಗುವವರ ಸಂಬಂಧವನ್ನು ಒಡೆಯುವಿಕೆ

ಹಿಂದೆ ಕೃಷಿ ಕೆಲಸಗಳಲ್ಲಿ ಪರಸ್ಪರರ ಸಹಭಾಗಿಗಳಾಗಿ ದುಡಿಯುತ್ತಿದ್ದು, ಯಾವುದೇ ಖರ್ಚಿಲ್ಲದೆ (ಫ್ರೀ ಆಫ್ ಕಾಸ್ಟ್) ವ್ಯವಸಾಯ ಮಾಡಿಕೊಳ್ಳುತ್ತಿದ್ದರು. ಆದರೆ ಹೊಸ ಗುತ್ತಿಗೆ ವ್ಯವಸಾಯದ ಪ್ರವೇಶದಿಂದ ಕೂಲಿ ಕೆಲಸದಲ್ಲಿ ಬಹಳ ತೊಂದರೆ ಆಗಿದ್ದು, ಬಹುತೇಕ ಕೂಲಿಕಾರರು ರೈತರ ಕೆಲಸಗಳಿಗೆ ಬರುವುದಿಲ್ಲ. ಎಲ್ಲರೂ ಹೊಸ ಗುತ್ತಿಗೆದಾರರ ಭೂಮಿಗೆ ಕೆಲಸಕ್ಕೆ ಹೋಗುತ್ತಾರೆ. ಏಕೆಂದರೆ ಕೂಲಿಕಾರರಿಗೆ ಬೆಳಗ್ಗೆ 8 ರಿಂದ ಮಧ್ಯಾಹ್ನ 2 ಗಂಟೆವರೆಗೆ ಒಂದು ದಿನದ ಕೂಲಿ, ಮಧ್ಯಾಹ್ನದ ನಂತರವೂ ಮಾಡುವ ಹೆಚ್ಚುವರಿ ಕೆಲಸಕ್ಕೆ ಹೆಚ್ಚಿನ ಹಣ ಸಿಗುತ್ತಿದೆ. ಹಾಗಾಗಿ ಪರಸ್ಪರ ಕೆಲಸಗಳಲ್ಲಿ ಸಹಭಾಗಿದಾರರಾಗಿ ದುಡಿಯುತ್ತಿದುದ್ದನ್ನು ಕೈ ಬಿಡಲಾಗಿದೆ. ಅಲ್ಲದೆ ಪ್ರಸ್ತುತ ಗುತ್ತಿಗೆದಾರರಿಂದ ಕೂಲಿ ದರ ಹೆಚ್ಚಾಗಿದ್ದು, ಅವರ ಭೂಮಿಯಲ್ಲೇ ಹೆಚ್ಚಿನ ದಿನಗಳು ಕೆಲಸ ಸಿಗುವುದರಿಂದ ಗ್ರಾಮದ ಇತರೆ ರೈತರಿಗೆ ಕೆಲಸ ಮಾಡಿಸಲು ಜನರು ಸಿಗುವುದಿಲ್ಲ. ಒಂದು ವೇಳೆ ಕೆಲಸಕ್ಕೆ ಜನ ಲಭ್ಯರಾದರೂ ಹೊಸ ಗುತ್ತಿಗೆದಾರರಷ್ಟೇ ಕೂಲಿಯನ್ನು ನೀಡಬೇಕಾಗಿದೆ ಎಂಬ ಅಳಲು ರೈತರದು.

## V. ಅವಕಾಶವಂಚಿತ ಕುಟುಂಬಗಳ ಖಂಡನೆ (ವಲ್ನರಬಿಲಟಿ) ಹೆಚ್ಚಾಗುವಿಕೆ

ಈ ಕುಟುಂಬಗಳಲ್ಲಿ ಬಂಡವಾಳ ಮತ್ತು ಸಾಮಾಜಿಕ ಬಂಡವಾಳದ ಕೊರತೆಯ ಜೊತೆಗೆ ಗುತ್ತಿಗೆ ವ್ಯವಸಾಯಕ್ಕೆ ಭೂಮಿ ನೀಡುತ್ತಿರುವುದು ಮತ್ತೊಂದು ಅನಾನುಕೂಲತೆ. ಗುತ್ತಿಗೆ ಅವಧಿಯ ಕೊನೆಯಲ್ಲಿ (18 ಅಥವಾ 36 ತಿಂಗಳು) ಬಿಡುವ ಭೂಮಿಯನ್ನು ಫಲವತ್ತತೆ ಹಾಳು ಮಾಡಲಾಗಿರುತ್ತದೆ. ಭೂ ಮಾಲೀಕ ಗುತ್ತಿಗೆಯಲ್ಲಿ ಪಡೆದುಕೊಂಡ ಹಣವನ್ನು ಆಹಾರ ಪದಾರ್ಥಗಳು ಮತ್ತು ಬಟ್ಟೆ ಬರೆ ಕೊಂಡುಕೊಳ್ಳಲು ಬೇಗನೆ ಖರ್ಚು ಮಾಡಿರುತ್ತಾರೆ. ಆದರೆ ಅವರೆ ಭೂಮಿಯನ್ನು ಮಾಡುತ್ತಿದ್ದಾಗ ಸ್ವಲ್ಪ ಪ್ರಮಾಣದಲ್ಲಾರೂ ಸಿಗುತ್ತಿದ್ದ ಪೌಷ್ಟಿಕ ಆಹಾರ ಇಲ್ಲದಂತಾಗಿ ಮತ್ತೆ ಪಡಿತರ ಅಕ್ಕಿಯನ್ನೇ ಅವಲಂಬಿಸಬೇಕು. ಈಗಾಗಲೇ ಪೌಷ್ಟಿಕ ಆಹಾರದ ಕೊರತೆಯಿಂದ ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿರುವ ಕುಟುಂಬಗಳು ಮತ್ತಷ್ಟು ಆರೋಗ್ಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಈ ಗುತ್ತಿಗೆ ವ್ಯವಸಾಯದಿಂದ ಸೋಲಿಗರು ಮತ್ತಷ್ಟು ಅಂಚಿಗೆ ತಳ್ಳಲ್ಪಡುವುದು ಸ್ಪಷ್ಟವಾಗಿದೆ. ವರ್ಷಗಳು ಉರುಳಿದಂತೆ ಗುತ್ತಿಗೆ ವ್ಯವಸಾಯವು ಮುಂದೆ ಅವರನ್ನು ಮತ್ತೇ ಭೂಮಿ

ವಂಚಿತರನ್ನಾಗಿಸುವ ಮತ್ತು ಉತ್ಪಾದನೆ ಮತ್ತು ಸಮಗ್ರ ಆರ್ಥಿಕತೆಯಿಂದ ವಂಚಿತರನ್ನಾಗಿ ಮಾಡಲಾಗುತ್ತದೆ. ಅವರ ಶಿಕ್ಷಣದ ಮಟ್ಟ ಕಡಿಮೆ ಇದ್ದು, ಹೊಸ ಆರ್ಥಿಕ (ನಗರ ಅಥವಾ ಗ್ರಾಮೀಣ) ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕಾದ ಸಾಧ್ಯತೆ ಇದೆ ಅಥವಾ ಇತರೆ ಕೆಲಸಗಳಿಂದ ಸಿಗುವ ಸಂಪನ್ಮೂಲಗಳ ಪ್ರಯೋಜನ/ಲಾಭ ಅತ್ಯಲ್ಪವಾಗಿದ್ದು ಅವರ ಅಸ್ತಿತ್ವಕ್ಕೆ ಉಳಿದಿದ್ದ ಸ್ವಲ್ಪ ಭೂಮಿಯನ್ನು ಕಳೆದುಕೊಳ್ಳುತ್ತಾರೆ ಅಥವಾ ಈಗ ಅಸ್ತಿತ್ವದಲ್ಲಿರುವ ಭೂಮಿಯನ್ನು ಕೆಳ ದರ್ಜೆಗೆ ಇಳಿಸುವುದರಿಂದ (ತಗ್ಗಿಸುವ) ಅವರು ಸುಸ್ಥಿರತೆ ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಗುತ್ತಿಗೆ ವ್ಯವಸಾಯದಲ್ಲಿ ಭೂ ಮಾಲೀಕ ಕೂಲಿ ಕೆಲಸಗಾರರಾಗಿದ್ದು, ಮುಂದೆ ನಿರ್ಗತಿಕರನ್ನಾಗಿ ಮಾಡಿ ಅವರನ್ನು ಅಲ್ಲಿಂದ ಹೊರಹಾಕಲಾಗುತ್ತದೆ. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮೇಲುಸ್ಥರದಲ್ಲಿದ್ದವರನ್ನು ಬೇರ್ಪಡಿಸಿ/ತುಂಡರಿಸಿ, ಚೌಕಾಶಿ ವ್ಯಾಪಾರ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ಮತ್ತು ವ್ಯವಸಾಯದ ಕಂಪನಿಗಳ ಆಟದಲ್ಲಿ ಪಾತ್ರದಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಈ ವೇಗದ ಪ್ರಗತಿ ವಿಚಾರಗಳು ಮುಂದೆ ಸೋಲಿಗರನ್ನು ನಿರ್ಗತಿಕರನ್ನಾಗಿಸುತ್ತದೆ. ಒಂದು ಅಂದಾಜು ಲೆಕ್ಕಚಾರದ ಪ್ರಕಾರ ಗುತ್ತಿಗೆ ವ್ಯವಸಾಯದ ನಂತರ ಅಲ್ಲಿನ ಪರಿಸರ ಮತ್ತು ಭೂಮಿಯ ಫಲವತ್ತತೆ ಸರಿಪಡಿಸುವಿಕೆಯ ಖರ್ಚು ಭೂ ಮಾಲಿಕರಿಗೆ ನೀಡಿರುವ ಗುತ್ತಿಗೆ ಹಣಕ್ಕಿಂತ ಹೆಚ್ಚು ಖರ್ಚು ಮಾಡಬೇಕಾಗುತ್ತದೆ.

ಗುತ್ತಿಗೆ ವ್ಯವಸಾಯದಿಂದ ಮಾಲಿಕ ಸ್ವಲ್ಪ ಹಣಪಡೆದರೂ ಅವನು ಅದಕ್ಕಿಂತಲ್ಲೂ ಹೆಚ್ಚು ನಷ್ಟವನ್ನು ಹೊಂದುತ್ತಾನೆ. ಇರುವ ಭೂಮಿ ಮತ್ತು ಪರಿಸರದ ಸ್ಥಿತಿಯನ್ನು ಬದಲಾಯಿಸುವುದರ ಜೊತೆಗೆ ಮಣ್ಣನ್ನು ಹಾಳುಮಾಡಿ, ಬದುಗಳನ್ನು ತೆಗೆದು ಸಮತಟ್ಟು ಮಾಡಿದ್ದು, ಅದರ ಮಣ್ಣು ಮಳೆಗಾಲದಲ್ಲಿ ಇಳಿಜಾರಿಗೆ ಕೊಚ್ಚಿ ಹೋಗುತ್ತದೆ ಅಲ್ಲದೆ ಮತ್ತೇ ಹೊಸ ಬದುಗಳನ್ನು ನಿರ್ಮಾಣ ಮಾಡಲು ಹೆಚ್ಚುವರಿ ಹಣ ಖರ್ಚು ಮಾಡಬೇಕಾಗುತ್ತದೆ. ಗುತ್ತಿಗೆದಾರ ಇವರ ಭೂಮಿಯ ಅಂತರ್ಜಲ ದಿಂದ ನೀರನ್ನು ಬಳಕೆ ಮಾಡಿಕೊಂಡಿದ್ದಲ್ಲದೆ, ಪರಿಸರದ ವೈವಿಧ್ಯತೆಯನ್ನು ಹಾಳು ಮಾಡಿರುತ್ತಾರೆ. ಈ ಭೂಮಿಯಲ್ಲಿ ಮುಂದೆ ಬೆಳೆ ತೆಗೆಯಬೇಕಾದರೆ ಉತ್ಪಾದನೆಯ ಮೇಲೆ ಪರಿಣಾಮಗಳನ್ನು ಬೀರುತ್ತವೆ ಎಂಬ ಅರಿವು ಇಲ್ಲದಿರುವುದು ಮಾಲಿಕರಿಗೆ ಆಗುವ ನಷ್ಟ. ಮುಂದೆ ಇವರು ಕೂಡ ಹೆಚ್ಚು ವಾಣಿಜ್ಯ ಬೆಳೆಗಳಿಗೆ ಆದ್ಯತೆ ನೀಡುತ್ತಾರೆ ಹೊರತು ಅವರ ಜೀವನೋಪಾಯದ ಆಹಾರದ ಬಗ್ಗೆ ಗಮನ ಹರಿಸುವುದಿಲ್ಲ ಮತ್ತು ಸಮಗ್ರ ಕೃಷಿ ಅಭ್ಯಾಸಗಳ ಮೂಲಕ ಭೂಮಿಯ ಸುಸ್ಥಿರತೆಯನ್ನು ಕಾಪಾಡುವ ಭರವಸೆಯನ್ನು ಇರುವುದಿಲ್ಲ.

ಹೊಸ ಗುತ್ತಿಗೆ ವ್ಯವಸಾಯ ಕುರಿತು ಸೋಲಿಗ ಹಿರಿಯ ರೈತರೊಬ್ಬರ ಅಭಿಪ್ರಾಯ

**"ಈ ಶುಂಠಿಗೆ ಭೂಮಿ ಕೊಟ್ಟವರಿಗೆ ಭಂಗ. ಇಸ್ಕೊಂಡ ದುಡ್ಡನ್ನಲ್ಲಿ ಲಂಗ್–ಬಂಗ್ಲಿಗೆ (ಬಟ್ಟೆ–ಬರೆ & ಇತರೆ) ಖರ್ಚ್ ಮಾಡ್ಕೊಂಡವರೆ. ಜಮೀನು ಕೊಟ್ಟವರಿಗೆ ಊರ್ನಲ್ಲಿ ಉಷಾರೇ ಇಲ್ಲ. ಅವರಿಗೆ ಉಣ್ಣಕ್ಕೆ (ಊಟಕ್ಕೆ) ರಾಗಿನೂ ಇಲ್ಲ. ಕಾಡನ್ನು (ಭೂಮಿಯನ್ನು) ಇನ್ನೊಬ್ಬರಿಗೆ ಕೊಟ್ಟು, ನೀನು ಇನ್ನೊಂದು**

**ಊರಲಿ ಹೋಗಿ ಗೇದರೆ (ಕೆಲಸ) ಅದು ಖಂಡಿತವೇ ತಪ್ಪು. ಆ ಶುಂಠಿಯವನಿಗೆ ನಮ್ಮ ಭೂಮಿ, ನೀರು ಎಲ್ಲಾ ಕೊಟ್ಟಟ್ಟು, ಭೂಮಿನಾ ಕಾರ ಮಾಡಿ ಕೊಡ್ತವನೆ. ಆಗ ಆ ಭೂಮಿಲಿ ಏನು ಬೇಕಾದದು. ಅದು ಜನಕ್ಕೆ ಇನ್ನೂ ಅರ್ಥ ಆಗ್ತಿಲ್ಲ"** ಎಂಬ ಬಾನವಾಡಿ ಗ್ರಾಮದ ಈರೇಗೌಡರ ವಿಮರ್ಶಾತ್ಮಕವಾದ ಅಭಿಪ್ರಾಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು.

## ಸಾರಾಂಶ

ಅಭಿವೃದ್ಧಿಗೆ ಕೊನೆ ಇಲ್ಲ ಎಂದುಕೊಳ್ಳದೆ ಅಭಿವೃದ್ಧಿ ಒಂದು ಪ್ರಕ್ರಿಯೆಯಾಗಿದ್ದು, ಅದಕ್ಕೂ ಕೆಲವು ಮಿತಿಗಳಿವೆ. ಆ ಮಿತಿಗಳನ್ನು ನಾವು ಪಾಲಿಸಬೇಕು. ಅಭಿವೃದ್ಧಿಯಲ್ಲಿ ಬಹುತ್ವ, ಜೀವನೋಪಾಯ, ಸಂಸ್ಕೃತಿ, ವಿಕೇಂದ್ರೀಕರಣದ ಪರಿಸ್ಥಿತಿಗಳನ್ನು ನೋಡಬೇಕು. ಕೃಷಿ ಭೂಮಿಯನ್ನು ಕೃಷಿಕರ ಕೈಯಲ್ಲಿ ಉಳಿಸಿ, ರಸಾಯನಿಕ ಮತ್ತು ಕ್ರಿಮಿನಾಶಕ ಮುಕ್ತ ಪೌಷ್ಟಿಕ ಆಹಾರ ಉತ್ಪಾದನೆಯೊಂದಿಗೆ, ಆರ್ಥಿಕ ಸ್ವಾವಲಂಬನೆ ಪಡೆದುಕೊಳ್ಳಬೇಕು. ಭೂಮಿ ಮತ್ತು ಪರಿಸರ ಸಂರಕ್ಷಣೆಯೊಂದಿಗೆ ಹೆಚ್ಚುತ್ತಿರುವ ಭೂ ತಾಪಮಾನವನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರ ನಿರ್ವಹಿಸಬೇಕು. ಖ್ಯಾತ ಅರ್ಥಶಾಸ್ತ್ರಜ್ಞರು ಮತ್ತು ನೋಬಲ್ ಪಾರಿತೋಷಕ ಪುರಸ್ಕೃತರು ಆದ ಅಮರ್ತ್ಯ ಸೇನ್ ಪ್ರಕಾರ ಮನುಷ್ಯನಿಗೆ ಬಡತನ, ಹಸಿವಿನಿಂದ ತನ್ನನ್ನು ತಾನು ಬಿಡಿಸಿಕೊಳ್ಳುವ ಸಾಮರ್ಥ್ಯ ಇರಬೇಕು. ಅಲ್ಲದೆ ಮನುಷ್ಯನಿಗೆ ಲಭ್ಯವಿರುವ ಅವಕಾಶಗಳನ್ನು ಧಾರಣಾ ಮಾಡಿಕೊಳ್ಳುವ ಸಾಮರ್ಥ್ಯ ಇರಬೇಕು. ಆ ಧಾರಣಾ ಸಾಮರ್ಥ್ಯಗಳು ಹೇಗೆ ಬರುತ್ತವೆ ಅಂದರೆ ಶಿಕ್ಷಣ, ಆರೋಗ್ಯ, ಸಮಾನತೆ, ಸ್ವಾತಂತ್ರ್ಯದಿಂದ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಾರೆ ಈ 'ಹೊಸ ಗುತ್ತಿಗೆ ವ್ಯವಸಾಯ'ದ ಪರಿಣಾಮಗಳು ಈ ವಲಯದ ಕೃಷಿ ಪ್ರದೇಶಗಳ ಮೇಲಾಗಿದೆ. ಭೂಮಿಯನ್ನು ಸಮತಟ್ಟು ಮಾಡುವ ಸಲುವಾಗಿ ಮಳೆ ನೀರನ್ನು ತಡೆಯುವ ಬದುಗಳನ್ನು ಒಡದು ಹಾಕಿದ್ದು, ಮಣ್ಣು ಮಳೆ ನೀರಿನಲ್ಲಿ ಕೊಚ್ಚಿ ಹೋಗುತ್ತಿದೆ. ನೀರಿನ ಅಂತರ್ಜಲದ ಮಟ್ಟ ಬರಿದು ಮಾಡುತ್ತಿದ್ದು, ಪರಿಸರದ ವೈವಿಧ್ಯತೆಯ ನಾಶ ಮಾಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇದರಿಂದ ಅಂಚಿನ ಸೋಲಿಗರ ಮೇಲೆ ಗಂಭೀರವಾದ ಪರಿಣಾಮಗಳನ್ನುಂಟು ಮಾಡುತ್ತದೆ. ಮುಂದೆ ಅವರನ್ನು ಆ ಭೂಮಿಯಿಂದ ಕಿತ್ತುಹಾಕುವ ಸಾಧ್ಯತೆಗಳಿರುತ್ತವೆ. ಕಾನೂನಿನ ಗೈರುಹಾಜರಿಯಿಂದ ಆ ಪ್ರದೇಶದ ಜನರ ಮಣ್ಣು ಮತ್ತು ನೀರಿನ ಮೂಲದ ಮೇಲೆ ದೀರ್ಘಕಾಲಿಕವಾದ ಪರಿಣಾಮಗಳಾಗುತ್ತಿದ್ದು, ಪ್ರತಿದಿನವೂ ಭೂ ರಚನೆಯನ್ನೇ ದೊಡ್ಡ, ದೊಡ್ಡ ಯಂತ್ರಗಳನ್ನು ಬಳಸಿ ಬದಲಾಯಿಸಲಾಗುತ್ತಿದೆ. ಇವು ಅಧಿಕೃತ ಸಂರಕ್ಷಣೆಯ ಮಾರ್ಗೋಪಾಯಗಳನ್ನು ಅದಲು-ಬದಲು ಮಾಡುತ್ತಿದ್ದು, 'ಹುಲಿ ಸಂರಕ್ಷಣಾ ಯೋಜನೆ' ಮತ್ತು 'ಆನೆ ಕಾರಿಡಾರ್ (ವಲಯ)' ಯೋಜನೆಗಳ ಪ್ರಕೃತಿ ಮತ್ತು ಪ್ರಾಣಿ ಸಂರಕ್ಷಣೆ ಮಾಡುವ ಉದ್ದೇಶಕ್ಕೆ ವಿರುದ್ಧವಾಗಿದೆ. ಇಂತಹ ಸಂರಕ್ಷಣಾ ಯೋಜನೆಗಳಿರುವ ಪ್ರದೇಶದಲ್ಲೇ ಈ ಹೊಸ ರೀತಿಯ ಗುತ್ತಿಗೆ ವ್ಯವಸಾಯವು ಹರಡುತ್ತಿರುವ

ಪರಿಣಾಮ ಇರುವುದನ್ನು ಕೆಡಿಸುವುದರ ಜೊತೆಗೆ ಮುಂದೆ ಪರಿಸರ ಅವನತಿ ಮತ್ತು ಜನರ ಜೀವನೋಪಾಯದ ಮಟ್ಟವನ್ನು ಕೆಳಕ್ಕೆ ಇಳಿಸುತ್ತದೆ.

ಮುಂದೆ ಕೃಷಿ ಭೂಮಿ ಸಾಮರ್ಥ್ಯವಿಲ್ಲದ ಕೃಷಿಯಾಗಿ ಮತ್ತು ಧೂಳಿನಿಂದ ತುಂಬಿದ ಪಾತ್ರೆಯಾಗಿ ಬದಲಾಯಿಸುವ ಸಾಧ್ಯತೆ ಇದೆ ಅಥವಾ ಮತ್ತಷ್ಟು ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ. ಈ ವಲಯವು ಬಿ.ಆರ್.ಟಿ.ಯ ಕೋರ್ ಜೋನ್ (ಸೂಕ್ಷ್ಮ ವಲಯ) ವ್ಯಾಪ್ತಿಗೆ ಒಳಪಡುತ್ತಿರುವುದರಿಂದ ಮುಂದೆ ಸೋಲಿಗರನ್ನು ಈ ಹಳ್ಳಿಗಳಿಂದ ಮತ್ತೇ ಒಕ್ಕಲೆಬ್ಬಿಸುವ ಸಾಧ್ಯತೆ ಇರುವುದರಿಂದ ಕೃಷಿ ಮತ್ತು ಸಂರಕ್ಷಣೆ ಹಾಗೂ ಜೀವನೋಪಾದ ವಿಷಯಗಳನ್ನು ಒಟ್ಟಿಗೆ ಕೂಡಿಸಿ ಕೆಲಸ ಮಾಡಬೇಕಾದ ಅಗತ್ಯವಿದೆ. ಪುಣಜನೂರು ಪಂಚಾಯಿತಿ ಪ್ರಕರಣದಲ್ಲಿ ಕೃಷಿ, ಅರಣ್ಯ ಮತ್ತು ಸಮಾಜಕಲ್ಯಾಣ ಹಾಗೂ ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆಗಳ ಪ್ರತಿನಿಧಿಸುವಿಕೆ ಬಹಳ ಕಡಿಮೆ ಇದ್ದು, ಈ ಇಲಾಖೆಗಳ ರಾಜನೀತಿಗಳ ಪರಿಶೀಲನೆಯಾಗಬೇಕು. ಉದಾ: ಅರಣ್ಯದಲ್ಲಿ ಯಾವುದು ಜೀವನೋಪಾಯದ್ದು ಎಂದು ಗುರುತಿಸಿ ಜನರಿಗೆ ಉತ್ತಮ ಜೀವನ ನಡೆಸುವ ಭರವಸೆಗಳನ್ನು ನೀಡಬೇಕು. ಸೋಲಿಗರಿಗೆ ಅವಶ್ಯಕ ನೆರವಿನ ಮೂಲಕ ಅರಣ್ಯ ಆಧಾರಿತ (ಅಗ್ರೋ ಫಾರೆಸ್ಟರಿ) ಕೈತೋಟಗಳ ನಿರ್ಮಾಣ (ಉದಾ: ನೆಲ್ಲಿ, ನೇರಳೆ, ಗಿಡಮೂಲಿಕೆ ಔಷಧ ಗಿಡಗಳು, ಗೆಡ್ಡೆಗೆಣಸು ಇತ್ಯಾದಿ), ವಾಣಿಜ್ಯ ಬೆಳೆಗಳಾದ ಏಕ ಬೆಳೆ ಪದ್ಧತಿಗೆ ಬದಲಾಗಿ ಬಹುಬೆಳೆ (ರಾಗಿ, ಜೋಳ, ಸಾಮೆ, ನವಣೆ, ಎಣ್ಣೆಕಾಳುಗಳು, ಬಗೆ ಬಗೆಯ ಬೀನ್ಸ್ ಇತ್ಯಾದಿ) ಪದ್ಧತಿಗೆ ಪ್ರೋತ್ಸಾಹಿಸಬೇಕು. ಇದರಿಂದ ಸೋಲಿಗರ ಜ್ಞಾನ ಮತ್ತು ಕೌಶಲ್ಯಗಳ ಪುನರ್ ಬಳಕೆಯಾಗುವುದಲ್ಲದೆ, ಅವರ ಸ್ಥಳೀಯ ಜ್ಞಾನದ ಉಳಿವು, ಪರಿಸರ ಸಂರಕ್ಷಣೆ ಮತ್ತು ಆರೋಗ್ಯದ ಕ್ಷೀಣಿಸುವಿಕೆಯನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ಅಲ್ಲದೆ ಅವರಲ್ಲಿದ್ದ ಆಸ್ತಿಯ ಸಾಮೂಹಿಕ ಒಡೆತನ, ಕೆಲಸದಲ್ಲಿ ಪರಸ್ಪರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಬೇಕು. ಕಾಡಿನ ಉಪ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವ ಪರಿಣಾಮಕಾರಿ ಸಹಕಾರ ಸಂಘಗಳ ಮೂಲಕ ಪರ್ಯಾಯ ಆರ್ಥಿಕ ವ್ಯವಸ್ಥೆಗಳನ್ನು ಕಲ್ಪಿಸಬೇಕು. ಬಂಡವಾಳಶಾಹಿಗಳಿಂದ ಅವರ ಭೂಮಿ ದುರ್ಬಳಕೆ ಮತ್ತು ಲೂಟಿ ಮಾಡುವುದನ್ನು ತಪ್ಪಿಸಬೇಕಾಗಿದೆ. ಕೃಷಿ ಭೂಮಿಯನ್ನು ಕೃಷಿಕರ ಕೈಯಲ್ಲಿ ಉಳಿಸಿ, ರಸಾಯನಿಕ ಮತ್ತು ಕ್ರಿಮಿನಾಶಕ ಮುಕ್ತ ಪೌಷ್ಟಿಕ ಆಹಾರ ಉತ್ಪಾದನೆಯೊಂದಿಗೆ, ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಆರ್ಥಿಕ ಸ್ವಾವಲಂಬನೆ ಪಡೆದುಕೊಳ್ಳುವಂತಾಗಬೇಕು.





**ಬಾನವಾಡಿ ಗ್ರಾಮಸ್ಥರ ಜೊತೆ ಸಮೀಕ್ಷೆಯ ಮುಖ್ಯ ವಿಷಯಗಳ ಹಂಚಿಕೆ**

**ಟಿಪ್ಪಣಿ :** ಚಾಮರಾಜನಗರ ತಾಲ್ಲೂಕಿನ ಪುಣಜನೂರು ಪಂಚಾಯಿತಿ ವಲಯದ ಈ ಕ್ಷೇತ್ರ ಅಧ್ಯಯನವನ್ನು ಪುನರ್ಚಿತ್ ಸದಸ್ಯರು ಮಾಡಿದ್ದಾರೆ. ಈ ಸಂಶೋಧನೆಯ ಮುಖ್ಯ ಜವಾಬ್ದಾರಿಯನ್ನು ಪಿ. ವೀರಭದ್ರನಾಯ್ಕ ನಿರ್ವಹಿಸಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದಿಂದ ಸಮಾಜಶಾಸ್ತ್ರ ವಿಷಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದು 2003 ರಿಂದಲ್ಲೂ ಚಾಮರಾಜನಗರ ಜಿಲ್ಲೆಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಹೆಚ್ಚುವರಿ ಸಹಾಯಕರಾಗಿ ಆರ್.ರಾಜಪ್ಪ ಸಂಶೋಧನಾ ಕೆಲಸದಲ್ಲಿ ನೆರವಾಗಿದ್ದಾರೆ. ಎ.ಆರ್.ವಾಸವಿ ಅವರು ಈ ವರದಿಯನ್ನು ಕನ್ನಡದಿಂದ ಇಂಗ್ಲೀಷ್‌ಗೆ ಭಾಷಾಂತರ ಮಾಡಲು ಸಹಾಯ ಮಾಡುವ ಜೊತೆಗೆ ಆಕರ ಗ್ರಂಥಗಳು ಮತ್ತು ಅಧ್ಯಯನದ ವಿಮರ್ಶೆಯನ್ನು ಮಾಡಿದ್ದಾರೆ. ಸುನಿತರಾವ್ ಭೂಮಿಯ ಬಳಕೆ ಮತ್ತು ಕೈ ತೋಟದ ಬಳಕೆಯ ಬಗ್ಗೆ ಒಳಸುರಿಗಳನ್ನು (ಇನ್‌ಪುಟ್ಸ್) ನೀಡಿದ್ದಾರೆ. ಅಭಿಷೇಕರವರು ಬಾನವಾಡಿ ಗ್ರಾಮದ ಅಧ್ಯಯನದ ಮುಖ್ಯಾಂಶಗಳನ್ನು ಹಂಚಿಕೊಳ್ಳುವ ಚಾರ್ಟ್‌ಗಳನ್ನು ಸಿದ್ಧಪಡಿಸುವಲ್ಲಿ, ರೇಖಾಚಿತ್ರಗಳನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಕ್ಷೇತ್ರದ ಚಿತ್ರ ರಚನೆಯನ್ನು ಮಾಡಿದ್ದಾರೆ. ಈ ಅಧ್ಯಯನ ಕೈಗೊಳ್ಳಲು ಮತ್ತು ಛಾಯಚಿತ್ರಗಳ ದಾಖಲೀಕರಣಕ್ಕೆ ರಿವಿಟಲೈಸಿಂಗ್ ರೈನ್‌ಫೆಡ್ ಅಗ್ರಿಕಲ್ಚರ್ (ಆರ್‌ಆರ್‌ಎ) ಸಹಾಯ ಮಾಡಿದ್ದು, ಪುನರ್ಚಿತ್ ಕೃತಜ್ಞವಾಗಿದೆ. ಅಧ್ಯಯನದ ಮುಖ್ಯಾಂಶಗಳನ್ನು ಬಾನವಾಡಿ ಗ್ರಾಮದ ಜನರ ಜೊತೆ ಹಂಚಿಕೊಂಡಿದ್ದು, ಈ ಅಧ್ಯಯನದ ಸಾರಾಂಶ, ಕೃಷಿ ಮತ್ತು ಈ ಪ್ರದೇಶದ ಜನರ ಛಾಯಚಿತ್ರಗಳನ್ನು ಒಳಗೊಂಡ ಕನ್ನಡ ಕೈಪಿಡಿಯನ್ನು ಸಿದ್ಧಪಡಿಸಿ, ಬಾನವಾಡಿ ಮತ್ತು ಕುಳ್ಳೂರು ಗ್ರಾಮದ ಜನರಿಗೆ ನೀಡಲಾಗುವುದು.

**ಟಿಪ್ಪಣಿ**

I. ಹೆಚ್ಚಿನ ವಿವರಕ್ಕಾಗಿ ರೈ ಮತ್ತು ಶೆಟ್ಟಿ ಅವರು ಬರೆದಿರುವ *ದಿ ಲಾಸಸ್ ಆಫ್ ಫಾರೆಸ್ಟ್ ಆಕ್ಸಸ್ ಆಂಡ್ ಇನ್‌ಕ್ರೀಸಿಂಗ್ ಮಾರ್ಜನಲೈಜೇಶನ್ ಆಫ್ ದಿ ಸೋಲಿಗಾಸ್ ಇನ್ ದಿ ಬಿಆರ್‌ಟಿಡಬ್ಲ್ಯೂಎಸ್ ಬೆಲ್ಟ್ (2013)* ಈ ಲೇಖನವನ್ನು ನೋಡಿ.

II. ಮನೆ/ಕುಟುಂಬ ಸಮೀಕ್ಷೆಯನ್ನು ಡಿಸೆಂಬರ್ 2014 ರಿಂದ ಜನವರಿ 2014 ರ ನಡುವೆ ಕೈಗೊಳ್ಳಲಾಗಿದೆ. ಈ ಸಮೀಕ್ಷೇಯಲ್ಲಿ 65 ಕುಟುಂಬಗಳ ಪೈಕಿ 55 ಕುಟುಂಬಗಳನ್ನು ಮಾತ್ರ ಸಮೀಕ್ಷೆಗೆ ಒಳಪಡಿಸಲಾಗಿದೆ. 05 ಕುಟುಂಬಗಳು ವಲಸೆ ಹೋಗಿದ್ದು, ಮನೆಗಳಿಗೆ ಬೀಗ ಹಾಕಲಾಗಿತ್ತು. 05 ಕುಟುಂಬಗಳಲ್ಲಿ ಕುಟುಂಬದ ಮುಖ್ಯಸ್ಥರು ಇಲ್ಲದ ಕಾರಣ ನಮ್ಮ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿಲ್ಲ.

III. ರಾಜ್ಯದಲ್ಲಿ ಅಪೌಷ್ಠಿಕತೆ ಸಮಸ್ಯೆಯನ್ನು ಗುರುತಿಸಿ, ಆ ಸಮಸ್ಯೆಯನ್ನು ಹೋಗಲಾಡಿಸಲು ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಈ ಕಾರ್ಯಕ್ರಮದಡಿ ಒಂದು ಕುಟುಂಬಕ್ಕೆ 15 ಕೆ.ಜಿ. ರಾಗಿ, 2 ಕೆ.ಜಿ. ಅಲಸಂದೆ, 01 ಕೆ.ಜಿ. ಹುರುಳಿ, 01 ಲೀಟರ್ ಅಡುಗೆ ಎಣ್ಣೆ ಮತ್ತು 30 ಮೊಟ್ಟೆಗಳನ್ನು ನೇರವಾಗಿ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಮೂಲಕ ಗ್ರಾಮದ ಎಲ್ಲಾ ಮನೆಗಳಿಗೂ ತಲುಪಿಸಲಾಗುತ್ತಿದೆ ಮತ್ತು ಇದನ್ನು ಜೂನ್ 2012 ರಿಂದ ಈವರೆವಿಗೂ ನೀಡಲಾಗುತ್ತಿದೆ.

IV. ಡೆನಿಯಲ್ ಮೌನ್ಸಟರ್ ಆಫ್ ದಿ ಯುನಿರ್ವಸಿಟಿ ಆಫ್ ಐಡಲ್‌ಬರ್ಗ್ (ಜರ್ಮನಿ), ಕೇರಳದ ವೈನಾಡ್ ಜಿಲ್ಲೆಯ *'ಜಿಂಜರ್ ಕಲ್ಟಿವೇಟರ್'* ಕುರಿತ ಸಂಶೋಧನೆಯನ್ನು ಕೈಗೊಂಡಿದ್ದು, ಈ ಅಧ್ಯಯನವು ಮುಖ್ಯವಾಗಿ ಗುತಿಗೆದಾರರ ಸಾಮಾಜಿಕ ಮತ್ತು ಆರ್ಥಿಕತೆಯ ಆಧಾರದಲ್ಲಿ ಕೃಷಿ ವಿಸ್ತರಣೆಯ ಮೂಲಕ ಅದರ ಉತ್ಪತ್ತಿಯನ್ನು ತಾರ್ಕಿಕವಾಗಿ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ ಎಂದು ತಿಳಿಸುತ್ತದೆ.

V. ಹೆಚ್ಚಿನ ವಿವರಕ್ಕಾಗಿ ನೋಡಿ *ಆನ್ ದಿ ಪ್ರೀ-ಎಕ್ಸಿಸ್ಟಿಂಗ್ ಫ್ರಮ್ ಆಫ್ ಫಾರೆಸ್ಟ್ ರಿಸೋರ್ಸಸ್ ಅಂಡ್ ದೇರ್ ಯೂಸಸ್*, ಬಾವಾ (2007).

VI. ಹೆಚ್ಚಿನ ವಿವರಕ್ಕಾಗಿ *ಫಾರೆಸ್ಟ್ –ಅಗ್ರಿಕಲ್ಚರಲ್ ಇಕೋ-ಟೈಪ್ಸ್ ಆಫ್ ದಿ ರೀಜನ್*. ಏಟ್ರೀ, ಬೆಂಗಳೂರು.

VII. ಇನ್ನೂ ಹೆಚ್ಚಿನ ವಿವರಕ್ಕಾಗಿ ನೋಡಿ ಮಂಡಲ್, ರೈ ಮತ್ತು ಮಾದೇಗೌಡ, 2010.

VIII. ಬಾನವಾಡಿ ಗ್ರಾಮದ ಜನರ ಪೌಷ್ಠಿಕತೆಯ ಸ್ಥಿತಿಯನ್ನು ನೇರವಾಗಿ ಪರಿಶೀಲಿಸಲು ಸಾಧ್ಯವಾಗದಿದ್ದರೂ ನಮ್ಮ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಸಾಕಷ್ಟು ಕುಟುಂಬಗಳಲ್ಲಿ ವೈದ್ಯಕೀಯ ಖರ್ಚು–ವೆಚ್ಚಗಳಿಗಳಿಗೆ ಹೆಚ್ಚು ಹಣಕಾಸನ್ನು ವ್ಯಯ ಮಾಡುತ್ತಿದ್ದು, ಶೇಕಡ 70 ರಷ್ಟು ಕುಟುಂಬಗಳಲ್ಲಿ ಅನಾರೋಗ್ಯದ ಸಮಸ್ಯೆಗಳಿವೆ. ನಾವು ನೋಡಿದಂತೆ 03 ಜನರಿಗೆ ಕ್ಷಯ (ಟಿ.ಬಿ.) ರೋಗದ ಸಮಸ್ಯೆಯಿದ್ದು, ಒಬ್ಬ ಮಾನಸಿಕ ಅಸ್ವಸ್ಥನಾಗಿದ್ದು, 06 ಜನರು ದೈಹಿಕ ನ್ಯೂನತೆಯುಳ್ಳವರಿದ್ದು, ಹೆಚ್ಚು ಜನರು ಅಪೌಷ್ಠಿಕತೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳಲ್ಲದೆ ಸೋಲಿಗರಲ್ಲಿ ವಂಶಪಾರಂಪರ್ಯವಾಗಿ ಬಂದಿರುವ ಕುಡುಗೋಲು ರಕ್ತಕಣ (ಸಿಕಲ್ ಸೆಲ್ ಅನಿಮಿಯಾ) ಸಮಸ್ಯೆಗಳಿದ್ದು, ಅವರ ಆರೋಗ್ಯದ ಕಡೆ ಹೆಚ್ಚು ಗಮನಕೊಡಬೇಕಿದೆ. ಬಾನವಾಡಿ ಜನರ ಒಟ್ಟು ಆರೋಗ್ಯದ ಸ್ಥಿತಿಯೂ ಸೇರಿದಂತೆ, ಸೋಲಿಗರ ಆರೋಗ್ಯದ ಮಟ್ಟ ಉತ್ತಮ ಸ್ಥಿತಿಯಲ್ಲಿ ಇಲ್ಲದಿರುವುದನ್ನು ಸೂಚಿಸುತ್ತದೆ. ಅಲ್ಲದೆ ದೀರ್ಘಾಯಸ್ಸಿನ ಮಟ್ಟ ಕೂಡ ಕಡಿಮೆ ಇದ್ದು, ಕೆಲವೇ ಕೆಲವರು 60 ವರ್ಷಕ್ಕಿಂತ ಮೇಲ್ಪಟ್ಟವರಿದ್ದು, ಬಾನವಾಡಿಯಲ್ಲಿ ಕೇವಲ 11 ಜನರು (08 ಮಹಿಳೆಯರು, 03 ಪುರುಷರು) 56 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದಾರೆ.

IX. ಮನೆ ಮನೆ ಸಮೀಕ್ಷೆಯಲ್ಲಿ ಮುಖ್ಯವಾಗಿ ಎದುರಿಸಿದ ಮತ್ತೊಂದು ಗಂಭೀರವಾದ ಸಮಸ್ಯೆ ಮದ್ಯಪಾನ. ನಮ್ಮ ಅವಲೋಕನದ ಪ್ರಕಾರ ಹೆಚ್ಚಿನ ಪುರುಷರು ಮದ್ಯಪಾನದ ಚಟಗಳಿಗೆ ಬಲಿಯಾಗಿದ್ದು, ಸಂಪಾದನೆಯ ಬಹುತೇಕ ಭಾಗವನ್ನು ಮದ್ಯಪಾನಕ್ಕೆ ಖರ್ಚು ಮಾಡುತ್ತಿದ್ದಾರೆ. ಮಹಿಳೆಯರಲ್ಲೂ ಮದ್ಯಪಾನದ ಬಳಕೆ ಇದ್ದರೂ ಪುರುಷರಷ್ಟು ಗಂಭೀರವಾಗಿಲ್ಲ.

X. ನೋಡಿ ಬಿನ್ಸ್‌ವೆಂಗರ್ ಮೆಕಂಜಿ (2013), *ಫಾರ್ ಆನ್ ಎಕ್ಸಪ್ಲೆನೇಷನ್ ಆಫ್ ಸಚ್ ಫಾರ್ಮ್ಸ್ ಆಫ್ ಟ್ರಾನ್ಸಫಾರಮೇಷನ್ ಇನ್ ಇಂಡಿಯಾಸ್ ಅಗ್ರಾರಿಯನ್ ಸೋಶಿಯಲ್ ಸ್ಟ್ರಕ್ಚರ್.*

XI. ಬಾನವಾಡಿ ಗ್ರಾಮದ ಒಟ್ಟು 65 ಕುಟುಂಬಗಳಲ್ಲಿ ಎರಡು ಕುಟುಂಬಗಳು ಮಾತ್ರ ಅರಣ್ಯ ಹಕ್ಕು ಕಾಯಿದೆ ಮೂಲಕ ಭೂಮಿ ಹಕ್ಕು ಪಡೆದಿದ್ದು, ಅದು ಒಣಭೂಮಿಯಾಗಿದ್ದು, ಅವರ ಹಳ್ಳಿಗೆ 4 ಕಿ.ಮೀ. ದೂರದಲ್ಲಿದೆ. ಬಹುತೇಕ ಕುಟುಂಬಗಳಿಗೆ ಯಾವುದೇ ಭೂಮಿ ಇಲ್ಲ, ಅವರಿಗೆ ಅರಣ್ಯ ಹಕ್ಕು ಕಾಯಿದೆ ಬಗ್ಗೆ ಅಷ್ಟೇನೂ ಮಾಹಿತಿ ಇಲ್ಲ ಮತ್ತು ಕಾನೂನು ಪ್ರಕಾರ ಹೇಗೆ ಭೂಮಿ ಪಡೆದುಕೊಳ್ಳಬೇಕು ಎಂಬ ಬಗ್ಗೆ ಅರಿವಿಲ್ಲ.

XII. ಸೇಮಾ ಪುರುಷೊತ್ತಮನ್ (2006). *ಆನ್ ದಿ ಡಿಫರೆನ್ಸಸ್ ಇನ್ ಕಲ್ಟಿವೇಟಿಂಗ್ ಪ್ರಾಕ್ಟೀಸ್ ಅಂಡ್ ದೇರ್ ಇಂಪ್ಲಿಕೇಷನ್ಸ್.*

**ಉಲ್ಲೇಖ**

ಬಾವಾ, ಕಮಲ್‌ಜಿತ್ .ಎಸ್, ಗ್ಲಾಡ್‌ವಿನ್ ಜೋಸೆಫ್, ಸಿದ್ಧಪ್ಪಶೆಟ್ಟಿ. 2007. *'ಪಾವರ್ಟಿ, ಬಯೋಡೈವರ್ಶಿಟಿ ಆಂಡ್ ಇನ್ಸಿಟಿಟ್ಯೂಷನ್ಸ್ ಇನ್ ಫಾರೆಸ್ಟ್ – ಅಗ್ರಿಕಲ್ಚರ್ ಇಕೋಟೋನ್ಸ್ ಇನ್ ದಿ ವೆಸ್ಟ್‌ರನ್ ಘಾಟ್ಸ್ ಅಂಡ್ ಈಸ್ಟರನ್ ಹಿಮಾಲಯ ರೇಂಜ್ ಆಫ್ ಇಂಡಿಯಾ'*. ಅಗ್ರಿಕಲ್ಚರ್, ಇಕೊಸಿಸ್ಟಮ್ಸ್ ಅಂಡ್ ಎನಿವಿರ್‍ನಾಮೆಂಟ್. ವಾಲಂ 121.

ಬಿನ್ಸ್‌ವೆಂಜರ್ ಮೆಕಂಜಿ, ಹನ್ಸ್, 2013. *'ದಿ ಸ್ಟಂಟೆಡ್ ಸ್ಟ್ರಕಚರಲ್ ಟ್ರಾನ್ಸ್‌ಫರ್‌ಮೇಷನ್ ಆಫ್ ದಿ ಇಂಡಿಯಾ ಎಕಾನಮಿ ಅಗ್ರಿಕಲ್ಚರ್, ಮ್ಯಾನಿಫ್ಯಾಕ್ಚರಿಂಗ್ ಆಂಡ್ ರೂರಲ್ ನಾನ್–ಫಾರಮ್ ಸೆಕ್ಟರ್.* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲೀ, ವಾಲಂ XIVII (ನಂ 26 & 27), ಜೂನ್.

ಮಂಡಲ್, ಸುಶ್ಮಿತ, ನಿತಿನ್ ಡಿ. ಆಂಡ್ ಸಿ. ಮಾದೇಗೌಡ. 2010. *'ಕಲ್ಚರ್, ಕಂಜರ್‌ವೇಷನ್ ಆಂಡ್ ಕೊ–ಮ್ಯಾನೇಜ್‌ಮೆಂಟ್: ಸ್ಟ್ರೆಂತನಿಂಗ್ ಸೋಲಿಗ ಸ್ಟೆಕ್ ಇನ್ ಬಯೋಡೈವರ್ಶಿಟಿ ಕಂಜರ್‌ವೇಷನ್ ಇನ್ ಬಿಳಿಗಿರಿ ರಂಗಸ್ವಾಮಿ ಟೆಂಪಲ್ ವೈಲ್ಡ್‌ಲೈಫ್ ಸ್ಯಾಂಚುರಿ, ಇಂಡಿಯಾ'*. ಇನ್ ಸೇಕ್ರೆಡ್ ನ್ಯಾಚುರಲ್ ಸೈಟ್ಸ್ : ಕಂಜರ್‌ವೇಷನ್ ಆಫ್ ನೇಚರ್ ಆಂಡ್ ಕಲ್ಚರ್.

ಪನ್ನೀರ್‌ಸೆಲ್ವಂ, ಪಿ, ಜೊನ್ ಎರಿಕ್ ಹರ್‌ಮ್ಯಾನ್‌ಸನ್, ಆಂಡ್ ನೈಲ್ಸ್ ಹಾಲ್‌ಬರ್ಗ್. 2011. *'ಫುಡ್ ಸೆಕ್ಯೂರಿಟಿ ಆಫ್ ಸ್ಮಾಲ್ ಹೋಲ್ಡಿಂಗ್ ಫಾರಮರ್ಸ್: ಕಂಫೆರಿಂಗ್ ಆರ್ಗ್ಯಾನಿಕ್ ಆಂಡ್ ಕನ್‌ವೆನ್ಸನಲ್ ಸಿಸ್ಟಮ್ಸ್ ಇನ್ ಇಂಡಿಯಾ.* ಜರ್ನಲ್ ಆಫ್ ಸಸ್ಟೈನಬಲ್ ಅಗಿಕಲ್ಚರ್, 35: 48–68.

ಪುರುಷೊತ್ತಮನ್, ಸೀಮಾ. 2006. *'ಲ್ಯಾಂಡ್–ಯೂಸ್ ಸ್ಟ್ರ್ಯಾಟಜೀಸ್ ಫಾರ್ ಟ್ರೈಬಲ್ಸ್: ಎ ಸೋಸಿಯೋ–ಎಕನಾಮಿಕ್ ಅನಾಲಿಸಿಸ್'*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲೀ, ವಾಲಂ XLI (2). ಜನವರಿ.

ರೈ, ನಿತಿನ್ ಡಿ. ಆಂಡ್ ಸಿದ್ದಪ್ಪಶೆಟ್ಟಿ. 2013. *'ಜಸ್ಟ್ ಹಾರವೆಸ್ಟ್ : ಇಕಾಲಜಿ ಅಂಡ್ ಪಾಲಿಟಿಕ್ಸ್ ಆಫ್ ಫಾರೆಸ್ಟ್ ಕ್ಯಾನಪಿ ಪ್ರಾಡಕ್ಟ್ ಯೂಸ್ ಇನ್ ಪ್ರೊಟೆಕ್ಟೆಡ್ ಏರಿಯಾಸ್'*. ಇನ್ ಎಂ ಲೊಮ್ಯಾನ್ ಇಟಿ ಅಲ್. (ಎಡ್.), ಟ್ರೀಟಾಪ್ಸ್ ಆಟ್ ರಿಸ್ಕ್ : ಚಾಲೆಂಜಸ್ ಆಫ್ ಗ್ಲೋಬಲ್ ಕ್ಯಾನಪಿ. ಇಕಾಲಜಿ ಅಂಡ್ ಕಂಜರ್‌ವೇಷನ್, ಸ್ಪ್ರಿಂಗರ್ : ನ್ಯೂಯಾರ್ಕ್.